ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮಾರ್ಚ್ 23, 2022

ಸಂಪುಟ : 48 ಸಂಚಿಕೆ : 312 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com



ಹರಿಹರ ಗ್ರಾಮದೇವತೆ ಊರಮ್ಮ ದೇವಿಯ ಚರಗಕ್ಕೆ ಬೇಕಾದ ಜೋಳವನ್ನು ಬೆಲ್ಲದ ಬಂಡಿಯಯಲ್ಲಿಟ್ಟು, ಮೆರವಣಿಗೆ ಮೂಲಕ ಚೌಕಿ ಮನೆಗೆ ತರುವಾಗ ಶಾಸಕ ಎಸ್. ರಾಮಪ್ಪ ಮತ್ತು ಮಾಜಿ ಶಾಸಕ ಬಿ.ಪಿ. ಹರೀಶ್ ಜೊತೆಯಲ್ಲಿ ಎತ್ತಿನ ಬಂಡಿಯಲ್ಲಿ ಬಂದು ಜೋಳ ಬೇಯಿಸಿದರು.

## ತೈಲ, ಅನಿಲ ದರ ಹೆಚ್ಚಳ

### ಪೆಟ್ರೋಲ್-ಡೀಸೆಲ್ 80 ಪೈಸೆ, ಅಡುಗೆ ಅನಿಲ ಸಿಲಿಂಡರ್ ಬೆಲೆ 50 ರೂ. ಏರಿಕೆ

ನವದೆಹಲಿ, ಮಾ. 22 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 80 ಪೈಸೆ ಹೆಚ್ಚಿಸಲಾಗಿದೆ ಮತ್ತು ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು 50 ರೂ. ಹೆಚ್ಚಿಸಲಾಗಿದೆ. ಚುನಾವಣಾ ಹಿನ್ನೆಲೆಯಲ್ಲಿ ಕಳೆದ ನಾಲ್ಕು ತಿಂಗಳಿಂದ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಬೆಲೆ ಹೆಚ್ಚಳ ಮಾಡಿರಲಿಲ್ಲ.

ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಬೆಲೆ ವ್ಯತ್ಯಾಸವಾಗುತ್ತದೆ. ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಈಗ 96.21 ರೂ. ಹಾಗೂ ಮುಂಬೈನಲ್ಲಿ 110.82 ರೂ. ಆಗಿದೆ.

ಸಬ್ಸಿಡಿಯೇತರ ಅಡುಗೆ ಅನಿಲದ ಸಿಲಿಂಡರ್ ಬೆಲೆಯನ್ನು 50 ರೂ. ಹೆಚ್ಚಿಸಲಾಗಿದೆ. ಇದರಿಂದಾಗಿ ಅಡುಗೆ ಅನಿಲ ಸಿಲಿಂಡರ್ ಬೆಲೆ ಸಾವಿರ ರೂ.ಗಳ ಹತ್ತಿರಕ್ಕೆ ತಲುಪಿದೆ.

ಈ ಹಿಂದೆ ಅಕ್ಟೋಬರ್ 6, 2021ರಂದು ಕೊನೆಯ ಬಾರಿಗೆ ಅಡುಗೆ ಅನಿಲದ ಬೆಲೆ



ಹೆಚ್ಚಿಸಲಾಗಿತ್ತು. ನಂತರದಲ್ಲಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳು ಘೋಷಣೆಯಾದ ನಂತರ ಬೆಲೆ ಏರಿಕೆ ನಿಲ್ಲಿಸಲಾಗಿತ್ತು.

ಈ ಹಿಂದೆ ಜನವರಿ 2014ರಂದು ಅಡುಗೆ ಅನಿಲದ ಸಿಲಿಂಡರ್ ಬೆಲೆ ಅತಿ ಹೆಚ್ಚಿನ 1,241 ರೂ.ಗಳಿಗೆ ತಲುಪಿತ್ತು. ಆದರೆ, ಆ ವೇಳೆ ಪ್ರತಿ ಸಿಲಿಂಡರ್‌ಗೆ 600 ರೂ.ಗಳ ಸಬ್ಸಿಡಿ ನೀಡಲಾಗುತ್ತಿತ್ತು.

ಮೇ 2020ರಂದು ಸರ್ಕಾರ ಅಡುಗೆ ಅನಿಲಕ್ಕೆ ನೇರ ಸಬ್ಸಿಡಿ ನೀಡುವುದನ್ನು ನಿಲ್ಲಿಸಿತ್ತು. ದುರ್ಗಮ ಪ್ರದೇಶಗಳ ಗ್ರಾಹಕರಿಗೆ ಮಾತ್ರ ಅಲ್ಪ ಮೊತ್ತದ ಸಬ್ಸಿಡಿ ನೀಡಲಾಗುತ್ತಿದೆ. ತೈಲ ಬೆಲೆ ಹೆಚ್ಚಳ ಮಾಡುತ್ತಿರುವುದರಿಂದ ಹಣದುಬ್ಬರದ ಮೇಲೆ ಒತ್ತಡ ಬೀಳಲಿದೆ.

ಬೆಲೆ ಏರಿಕೆಯನ್ನು ಪ್ರತಿಪಕ್ಷಗಳು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿವೆ.

ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ನೀಡಿದ್ದು, ದೇಶದ ಬಹುತೇಕ ಭಾಗಗಳಲ್ಲಿ ಅಡುಗೆ ಅನಿಲದ ಸಿಲಿಂಡರ್ ಬೆಲೆಯನ್ನು 1,000 ರೂ.ಗಳಿಗೆ ಹೆಚ್ಚಿಸುವ ಗುರಿಯನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಾಧಿಸಿದ್ದು, ಅವರಿಗೆ ಅಭಿನಂದನೆ ಎಂದು ಲೇವಡಿ ಮಾಡಿದ್ದಾರೆ.

ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಪ್ರತಿನಿತ್ಯ ವಿಕಾಸವಾಗುತ್ತಿವೆ. ಮೋದಿ ಸರ್ಕಾರದಲ್ಲಿ ಕೋಮುವಾದ ಹಾಗೂ ದ್ವೇಷ ಮಾತ್ರ ಸುಲಭವಾಗಿ ಸಿಗುತ್ತಿವೆ ಎಂದವರು ಹೇಳಿದ್ದಾರೆ. ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ (2ನೇ ಪುಟಕ್ಕೆ)

## ಹರಿಹರದಲ್ಲಿ ಊರಮ್ಮ ದೇವಿ ಹಬ್ಬದ ಸಂಭ್ರಮ

ಹರಿಹರ, ಮಾ.22- ನಗರದಲ್ಲಿ ಗ್ರಾಮದೇವತೆ ಊರಮ್ಮ ದೇವಿಯ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ ಮಾಜೇನಹಳ್ಳಿ ಗ್ರಾಮದೇವತೆ ದೇವಸ್ಥಾನದಲ್ಲಿ ಊರಮ್ಮ ದೇವಿಗೆ ವಿಶೇಷ ಪೂಜೆ ನಡೆಯಿತು. ಸಾರ್ವಜನಿಕರು ಸರದಿ ಸಾಲಿನಲ್ಲಿ ನಿಂತು ದೇವಿ ದರ್ಶನ ಪಡೆದರು.

ಚರಗ ಹಾಕುವ ಜೋಳವನ್ನು ಪೂಜಿಸಿ, ಬೇಯಿಸಿ, ಮೆರವಣಿಗೆ ಮೂಲಕ ತಂದು ರಾತ್ರಿ ವಿಶೇಷ ಪೂಜೆ ಸಲ್ಲಿಸಿ ಮಹಾಮಂಗಳಾರತಿ ನಂತರ ಹಿಟ್ಟಿನ ಕೋಣನ ವಧೆ ಮಾಡಲಾಯಿತು. ನಂತರ ಜೀವಂತ ಕೋಣದ ರಕ್ತವನ್ನು ಸಿರೆಂಜ್‌ನಲ್ಲಿ ತೆಗೆದು ಅದನ್ನು ಚರಗ ರಾಶಿಗೆ ಹಾಕಿ, ನಗರದ ಹೊರ ಪ್ರದೇಶಗಳಲ್ಲಿ ಚರಗ ಹಾಕಲಾಯಿತು. ನಂತರ ಉಪವಾಸ ಮಾಡಿದವರನ್ನು ಅವರ ಮನೆಗಳಿಂದ ಮೆರವಣಿಗೆ ಮೂಲಕ ಚೌಕಿ ಮನೆಗೆ ಕರೆತಂದು ಪೂಜೆ ಸಲ್ಲಿಸಿ ಉಪವಾಸ ಮಾಡಿದ ಕುಟುಂಬದ ಸದಸ್ಯರಿಗೆ ಊಟ ಬಡಿಸಲಾಯಿತು.

ಕಸಬಾ ಗ್ರಾಮದ ಶಿಬಾರ ಗ್ರಾಮದೇವತೆ ದೇವಸ್ಥಾನ, ಮುಖ್ಯ ರಸ್ತೆಯ ದೇವಸ್ಥಾನ, ಹೊಸಭರಂಪುರ ದೇವಸ್ಥಾನ, ಎ.ಕೆ. ಕಾಲೋನಿ ದೇವಸ್ಥಾನ, ಆಶ್ರಯ ಕಾಲೋನಿಯ ದೇವಸ್ಥಾನಗಳು ಸೇರಿದಂತೆ ಮಾಜೇನಹಳ್ಳಿ ಲದ್ವಾ ಬಡಾವಣೆ ದೇವಸ್ಥಾನ, ಇಂದ್ರಾ ನಗರ ದೇವಸ್ಥಾನಗಳಲ್ಲಿ ಬೆಳಗ್ಗೆ ದೇವಿಗೆ ವಿಶೇಷ ಪೂಜೆ, ಅಲಂಕಾರ ನಡೆಯಿತು. ಮನೆಗಳಲ್ಲಿ ಸಿಹಿ ಅಡುಗೆ ಮಾಡಲಾಗಿತ್ತು. ಯುವಕರು (2ನೇ ಪುಟಕ್ಕೆ)

## ಬೇಡ ಜಂಗಮ ಹೆಸರಿನಲ್ಲಿ ಎಸ್‌ಸಿ ಪ್ರಮಾಣ ಪತ್ರ : ಶಾಸಕರ ಆಕ್ಷೇಪ

ಬೆಂಗಳೂರು, ಮಾ. 22- ರಾಜ್ಯದಲ್ಲಿ ಬೇಡ ಜಂಗಮರ ಹೆಸರಿನಲ್ಲಿ ಮೇಲ್ಜಾತಿಯವರು ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ ಎಂದು ಬಿಜೆಪಿ ಶಾಸಕ ಪಿ. ರಾಜೀವ್ ವಿಧಾನಸಭೆಯಲ್ಲಿ ಆರೋಪಿಸಿದ್ದಾರೆ.

ವಿಧಾನಸಭೆಯಲ್ಲಿ ನಿಯಮ 69ರಡಿ ಚರ್ಚೆಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಗಳಲ್ಲಿ ಬೇಡ ಜಂಗಮ ಸೇರಿದೆ. ಆದರೆ, ರಾಜ್ಯದಲ್ಲಿ ಮೇಲ್ಜಾತಿಯವರು ಬೇಡ ಜಂಗಮ ಎಂಬ ಜಾತಿ ಪ್ರಮಾಣ ಪತ್ರ ಪಡೆಯುವ ಮೂಲಕ ನಿಜವಾದ ಬೇಡ ಜಂಗಮರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದರು.

ಈ ಬಗ್ಗೆ 1995ರಲ್ಲಿ ಇದೇ ಸದನದಲ್ಲಿ ಚರ್ಚೆಯಾಗಿದೆ. ಆಗ ಮಾತನಾಡಿದ್ದ ಮಲ್ಲಿಕಾರ್ಜುನ ಖರ್ಗೆ ಹಾಗೂ ಬಿ.ಟಿ. ಲಲಿತಾ ನಾಯ್ಕ ಅವರು, ಬೆಕ್ಕು ಹಾಗೂ ಅಳಿಲುಗಳನ್ನೂ ಹಿಡಿದು ತಿನ್ನುವವರು ಬೇಡ ಜಂಗಮರು ಎಂದು ಹೇಳಿದ್ದರು ಎಂದು ತಿಳಿಸಿದರು. ಬೇಡ ಜಂಗಮ ಹಾಗೂ ಬುಡ್ಗ ಜಂಗಮರೇ ಬೇರೆ, ಲಿಂಗಾಯತರಲ್ಲಿ ಬರುವ ಜಂಗಮರೇ ಬೇರೆ ಎಂದವರು ದಾಖಲೆಗಳನ್ನು ಉಲ್ಲೇಖಿಸಿ ಹೇಳಿದರು.

ಈ ಬಗ್ಗೆ ಮಾತನಾಡಿದ ಬಿಜೆಪಿ ಶಾಸಕ ಎನ್. (2ನೇ ಪುಟಕ್ಕೆ)

## ರೈತರು ನಗದು ಪರಿಹಾರ ಬಯಸದಿದ್ದರೆ ಕೆಐಡಿಬಿ ಜಾಗ

ಬೆಂಗಳೂರು, ಮಾ. 22 - ಕೆಐಡಿಬಿಗೆ ಸ್ವಾಧೀನಪಡಿಸಿಕೊಂಡ ಜಮೀನಿಗೆ ರೈತರು ನಗದು ಪರಿಹಾರ ಪಡೆಯದೇ ಇದ್ದಲ್ಲಿ, ಅಭಿವೃದ್ಧಿಪಡಿಸಿದ ನಿವೇಶನದಲ್ಲಿ ಪ್ರತಿ ಎಕರೆಗೆ 10,781 ಚದರ ಅಡಿ ಜಾಗವನ್ನು ಫಲಾನುಭವಿಗಳಿಗೆ ನೀಡಲು ನಿರ್ಧರಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ವಿಧಾನಪರಿಷತ್‌ನಲ್ಲಿಂದು ತಿಳಿಸಿದ್ದಾರೆ.

ಸಲೀಂ ಅಹಮ್ಮದ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಈ ಮೊದಲು ಪ್ರತಿ ಎಕರೆಗೆ 9,500 ಚದರ ಅಡಿ ಅಭಿವೃದ್ಧಿಪಡಿಸಿದ ಜಾಗವನ್ನು ಭೂಮಾಲೀಕರಿಗೆ ನೀಡಲಾಗುತ್ತಿತ್ತು. ಈಗ ಎಕರೆಗೆ 10,781 ಚದರ ಅಡಿ ಜಾಗವನ್ನು ನೀಡಲು ನಿರ್ಧರಿಸಲಾಗಿದೆ ಎಂದರು.

ಜಮೀನು ಕಳೆದುಕೊಂಡ ಕುಟುಂಬದ ಸದಸ್ಯರಿಗೆ ಅವರ ಶೈಕ್ಷಣಿಕ ಅರ್ಹತೆಗೆ ಅನುಗುಣವಾಗಿ ಸ್ಥಾಪಿತ ಕೈಗಾರಿಕೆಗಳಲ್ಲಿ ಉದ್ಯೋಗ ಅವಕಾಶಗಳನ್ನು ಕಲ್ಪಿಸಲಾಗುತ್ತದೆ. ಭೂಮಿ ಬದಲಿಗೆ ಪರ್ಯಾಯ ಭೂಮಿ ನೀಡುವ ವ್ಯವಸ್ಥೆ ದೇಶದಲ್ಲಿ ಎಲ್ಲಿಯೂ (3ನೇ ಪುಟಕ್ಕೆ)

## ಐದು ವರ್ಷವಾದರೂ ಮುಗಿಯದ ಜಿ.ಎಸ್.ಟಿ. ಸಮಸ್ಯೆಗಳು



ದಾವಣಗೆರೆ, ಮಾ. 22 - ದೇಶದ ಅತಿ ದೊಡ್ಡ ತೆರಿಗೆ ಸುಧಾರಣಾ ಕಾಯ್ದೆ ಆಗಿ ಸಂಸತ್ತಿನಲ್ಲಿ ಮಧ್ಯರಾತ್ರಿ ನಡೆದ ಅಪರೂಪದ ಸಮಾರಂಭದಲ್ಲಿ ಜಾರಿಗೆ ಬಂದ ಜಿ.ಎಸ್.ಟಿ., ಐದು ವರ್ಷಗಳ ನಂತರವೂ ಸಮಸ್ಯೆಗಳನ್ನು ಎದುರಿಸುತ್ತಿರುವ ಆಕ್ಷೇಪಗಳು ಸಿ.ಜಿ.ಎಸ್.ಟಿ. ವಾಯುವ್ಯ ಆಯುಕ್ತಾಲಯ ಹಾಗೂ ಆಡಿಟ್ - 2 ಆಯುಕ್ತಾಲಯ ಆಯೋಜಿಸಿದ್ದ ಜನ ಸಂಪರ್ಕ ಕಾರ್ಯಕ್ರಮದಲ್ಲಿ ಕೇಳಿ ಬಂದವು.

ಜಿ.ಎಸ್.ಟಿ. ಹೊಸ ಕಾಯ್ದೆಯಾಗಿರುವ ಕಾರಣ ದಂಡ ವಿಧಿಸುವುದಿಲ್ಲ ಎಂದು ಮೌಖಿಕವಾಗಿ ಭರವಸೆ ನೀಡಲಾಗಿತ್ತು. ಆದರೀಗ ನೋಟಿಸ್ ಕಳಿಸಲಾಗುತ್ತಿದೆ. ಒಂದರ ಹಿಂದೊಂದರಂತೆ

**ದಂಡ ವಿಧಿಸುವುದಿಲ್ಲ ಎಂಬ ಭರವಸೆ ಉಲ್ಲಂಘಿಸಿ ನೋಟಿಸ್‌ಗೆ ಆಕ್ಷೇಪ**

ಬರುತ್ತಿರುವ ಅಧಿಸೂಚನೆಗಳನ್ನು ಓದಿ ಅರ್ಥ ಮಾಡಿಕೊಂಡು ವ್ಯಾಪಾರಿಗಳಿಗೆ ತಿಳಿಸುವುದು ಕಷ್ಟವಾಗುತ್ತಿದೆ ಎಂಬ ವಿಷಯ ಸಭೆಯಲ್ಲಿ ಪ್ರತಿಧ್ವನಿಸಿತು. ನಿರಂತರವಾಗಿ ಬರುತ್ತಿರುವ ಆದೇಶಗಳನ್ನು ಕೆಲವೊಮ್ಮೆ ನಾವೇ ಓದಿರುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದೂ ಆಯಿತು.

ಸಮಸ್ಯೆಗಳಿದ್ದರೆ ನಮ್ಮನ್ನು (2ನೇ ಪುಟಕ್ಕೆ)

## ಜನಗಣತಿ ಪ್ರಶ್ನೆಗಳಿಗೆ ಉತ್ತರಿಸುವುದು ಕಾನೂನು ಬಾಧ್ಯತೆ

**ಕೇಂದ್ರ**

ನವದೆಹಲಿ, ಮಾ. 22 - ಜನಗಣತಿ ವೇಳೆ ಕೇಳಲಾಗುವ ಪ್ರಶ್ನೆಳಿಗೆ ಪ್ರತಿ ಯೊಬ್ಬ ಭಾರತೀಯ ಉತ್ತರ ನೀಡುವುದು ಕಾ2ನೂನು ಬಾಧ್ಯತೆಯಾಗಿದೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

ಕೇಂದ್ರ ಗೃಹ ಖಾತೆ ಸಚಿವ ನಿತ್ಯಾನಂದ ರಾಯ್ ಅವರು ಹೇಳಿಕೆ ನೀಡಿದ್ದು, ಸೆನ್ಸಸ್ ಕಾಯ್ದೆ 1948ರ ಅನ್ವಯ ಜನಗಣತಿ ನಡೆಸಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ಪ್ರಶ್ನೆಗಳಿಗೆ ತನಗೆ (3ನೇ ಪುಟಕ್ಕೆ)

## ಬೆಲೆ ಏರಿಕೆಗೆ ಪ್ರತಿಪಕ್ಷಗಳ ತರಾಟೆ

ನವದೆಹಲಿ, ಮಾ. 22 – ತೈಲ ಬೆಲೆ ಹಾಗೂ ಅಡುಗೆ ಅನಿಲ ಬೆಲೆ ಏರಿಕೆ ವಿರುದ್ಧ ಪ್ರತಿಪಕ್ಷಗಳು ಸಂಸತ್ತಿನಲ್ಲಿ ಪ್ರತಿಭಟಿಸಿ, ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿವೆ.

ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಸಂಸತ್ತಿನ ಉಭಯ ಸದನಗಳಲ್ಲಿ ಪ್ರತಿಭಟನೆ ನಡೆಸಿ ಸಭಾತ್ಯಾಗ ಮಾಡಿವೆ. ರಾಜ್ಯಸಭೆಯಲ್ಲಿ ಸದನದ ಕಲಾಪ ಎರಡು ಬಾರಿ ಮುಂದೂಡಲಾಯಿತು. ಚುನಾವಣೆ (3ನೇ ಪುಟಕ್ಕೆ)

## ಉಕ್ರೇನ್ ಸಂಘರ್ಷ; ವಿಶ್ವಾದ್ಯಂತ ಹೆಚ್ಚಿದ ಗೋಧಿ ಬೆಳೆ ಚಿಂತೆ

ಯುನೈಟೆಡ್ ಅರಬ್ ಎಮಿರೇಟ್ಸ್, ಮಾ. 22 - ಉಕ್ರೇನ್ ಮೇಲೆ ರಷ್ಯಾ ಸಾರಿರುವ ಸಮರದಿಂದಾಗಿ ವಿಶ್ವದಾದ್ಯಂತ ಗೋಧಿ ಪೂರೈಕೆ ಮೇಲೆ ಪರಿಣಾಮವಾಗಿದೆ. ಗೋಧಿ ಬೇಡಿಕೆ ಹೆಚ್ಚಾಗಿರುವುದರಿಂದ ವಿಶ್ವದಾದ್ಯಂತ ರೈತರು ಬೆಳೆ ಪದ್ಧತಿಯ ಬಗ್ಗೆ ಯೋಚಿಸುವಂತಾಗಿದೆ.



ಉಕ್ರೇನ್‌ನಿಂದ ಗೋಧಿ ರಫ್ತು ಕಡಿಮೆಯಾದ ಹಿನ್ನೆಲೆಯಲ್ಲಿ ಭಾರತ ಮತ್ತು ಆಸ್ಟ್ರೇಲಿಯಾಗಳು ರಫ್ತಿಗೆ ಆದ್ಯತೆ ನೀಡಿವೆ. ಆದರೆ, ತಕ್ಷಣಕ್ಕೆ ಬೇರೆಡೆಯಿಂದ ಗೋಧಿ ಲಭ್ಯವಾಗುವ ಸಾಧ್ಯತೆ ಕಡಿಮೆ ಎಂದು ಪರಿಣಿತರು ಹೇಳಿದ್ದಾರೆ. ದಾಳಿಯ ನಂತರ ಗೋಧಿ ಬೆಲೆ ಮೂರು ಬಾರಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಮುಂದಿನ ಹಂಗಾಮಿನಲ್ಲಿ ಗೋಧಿ ಹೆಚ್ಚು ಬೆಳೆಯುವುದಾಗಿ (3ನೇ ಪುಟಕ್ಕೆ)

## ಪ್ರತಿಷ್ಠೆ ಬಿಟ್ಟು ಜನರ ಸೇವೆಗೆ ಮುಂದಾಗಬೇಕು : ಐಜಿಪಿ

### ನಾಗರಿಕ ಪೊಲೀಸ್ ಪ್ರಶಿಕ್ಷಣಾರ್ಥಿಗಳಿಗೆ ಕರೆ



ದಾವಣಗೆರೆ, ಮಾ.22- ತರಬೇತಿ ಪೂರ್ಣಗೊಳಿಸಿ ಪೊಲೀಸ್ ಸೇವೆಗೆ ಅಣಿಯಾಗುತ್ತಿರುವ ನೂತನ ಪೊಲೀಸರು ಶಿಸ್ತು, ಕರ್ತವ್ಯ ನಿಷ್ಠೆ, ಪ್ರಾಮಾಣಿಕತೆ, ಬದ್ಧತೆ ರೂಢಿಸಿಕೊಳ್ಳುವ ಮೂಲಕ ಸಾರ್ವಜನಿಕ ಸೇವೆಗೆ ಮುಂದಾಗಬೇಕೆಂದು ಪೂರ್ವ ವಲಯ ಪೊಲೀಸ್ ಮಹಾ ನಿರೀಕ್ಷಕ ಡಾ. ತ್ಯಾಗರಾಜನ್ ಪ್ರಶಿಕ್ಷಣಾರ್ಥಿಗಳಿಗೆ ಕರೆ ನೀಡಿದರು.

ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ತಾತ್ಕಾಲಿಕ ತರಬೇತಿ ಶಾಲೆ ವತಿಯಿಂದ ಹಮ್ಮಿಕೊಂಡಿದ್ದ 9 ನೇ ತಂಡದ ನಾಗರಿಕ ಪೊಲೀಸ್ ಪ್ರಶಿಕ್ಷಣಾರ್ಥಿ ಗಳ ನಿರ್ಗಮನ ಪಥಸಂಚಲನ ಕಾರ್ಯಕ್ರಮದಲ್ಲಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು. (2ನೇ ಪುಟಕ್ಕೆ)

## ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರುಗಳಾದ (1) ಶ್ರೀಮತಿ ಸಾವಿತ್ರಮ್ಮ ಕೋಂ ಮುರಿಗೇಂದ್ರಪ್ಪ, (2) ಶ್ರೀಮತಿ ನಾಗರತ್ನ ಕೋಂ ಸಿ.ಜಿ. ಹುನಗುಂದ , (3) ಶ್ರೀಮತಿ ಉಮಾದೇವಿ ಕೋಂ ಗುರುರಾಜ, (4) ಶ್ರೀಮತಿ ಗಿರಿಜಾ ಕೋಂ ಸುಭಾಷ್ ಮತ್ತು (5) ಶ್ರೀಮತಿ ಮಮತಾ ಕೋಂ ರವಿ ಎಲ್ಲರ ವಾಸ: ದಾವಣಗೆರೆ ಇವರ ಪರವಾಗಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ನನ್ನ ಕಕ್ಷಿದಾರರು ದಿವಂಗತ ಡಾ|| ಬೂದಾಳ್ ಶಂಕರಪ್ಪ ಮತ್ತು ಸದರಿಯವರ ಪತ್ನಿ ದಿವಂಗತ ಶ್ರೀಮತಿ ಪುಟ್ಟಮ್ಮನವರ ಮಕ್ಕಳುಗಳಾಗಿದ್ದು, ಸದರಿಯವರಿಗೆ ನಮ್ಮ ಕಕ್ಷಿದಾರರನ್ನು ಹೊರತುಪಡಿಸಿ 3 ಜನ ಗಂಡು ಮಕ್ಕಳಿದ್ದು, ಅವರುಗಳ ಪೈಕಿ ಇಬ್ಬರು ಗಂಡು ಮಕ್ಕಳು ಅಂದರೆ ಬಸವರಾಜ್ ಬಿ. ಮತ್ತು ಚನ್ನರಾಜ್ ಬಿ. ಇವರುಗಳು ಮೃತರಾಗಿರುತ್ತಾರೆ. ಈ ಕೆಳಕಂಡ ಆಸ್ತಿಗಳು ನಮ್ಮ ಕಕ್ಷಿದಾರರುಗಳ ಮತ್ತು ಅವರ ಸಹೋದರರುಗಳ ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ನಮ್ಮ ಕಕ್ಷಿದಾರರುಗಳಿಗೆ ಸದರಿ ಆಸ್ತಿಗಳಲ್ಲಿ ಸಮನಾದ ಹಕ್ಕು ಇರುತ್ತದೆ. ಸದರಿ ಆಸ್ತಿಗಳು ದಿವಂಗತ ಡಾ|| ಬೂದಾಳ್ ಶಂಕರಪ್ಪ ಇವರ ಜೀವಿತ ಕಾಲದಲ್ಲಾಗಲೀ ಅಥವಾ ಅವರ ಮರಣಾ ನಂತರವಾಗಲೀ ಯಾವುದೇ ರೀತಿಯಲ್ಲಿ ಪಾಲು ವಿಭಾಗ ಆಗಿರುವುದಿಲ್ಲ. ಆದರೂ ಸಹ ಸದರಿಯವರ ಗಂಡು ಮಗನಾದ ಡಾ|| ಮಲ್ಲಿಕಾರ್ಜುನ್ ಮತ್ತು ದಿವಂಗತ ಬಸವರಾಜ್ ಬಿ. ಮತ್ತು ದಿವಂಗತ ಚನ್ನರಾಜ್ ಬಿ. ಇವರ ವಾರಸುದಾರರುಗಳು ಸೇರಿಕೊಂಡು ಒಟ್ಟು ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ನಮ್ಮ ಕಕ್ಷಿದಾರರ ಒಪ್ಪಿಗೆಯಿಲ್ಲದೇ ಬೇರೆಯವರಿಗೆ ಮಾರಾಟ ಮಾಡುವ ತರಾತುರಿಯಲ್ಲಿರುವುದ ತಿಳಿದು ಬಂದಿರುತ್ತದೆ.

ಆದ್ದರಿಂದ ಷೆಡ್ಯೂಲ್ ಆಸ್ತಿಗಳ ಸಂಬಂಧ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಆಸ್ತಿಗಳನ್ನು ಕ್ರಯಕ್ಕೆ ಪಡೆಯುವುದಾಗಲೀ, ಭೋಗ್ಯಕ್ಕೆ ಹಾಕಿಕೊಳ್ಳುವುದಾಗಲೀ ಅಥವಾ ಬೇರೆ ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಯಪಡಿಸಲಾಗಿದೆ. ಒಂದು ವೇಳೆ ಸಾರ್ವಜನಿಕರು ಯಾರೇ ಆಗಲೀ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ರೀತಿ ವ್ಯವಹಾರ ಮಾಡಿದಲ್ಲಿ ಸದರಿ ವ್ಯವಹಾರವು ನಮ್ಮ ಕಕ್ಷಿದಾರರುಗಳ ಹಕ್ಕಿಗೆ ಯಾವುದೇ ರೀತಿ ಬಂಧನಕಾರಿಯಾಗುವುದಿಲ್ಲ ಎಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

### ಷೆಡ್ಯೂಲ್

1. ದಾವಣಗೆರೆ ಜಿಲ್ಲೆ ಕಸಬಾ ಹೋಬಳಿ, ದೊಡ್ಡ ಬೂದಿಹಾಳ್ ಗ್ರಾಮದ ಸ.ನಂ.17/1 ರಲ್ಲಿ ವಿಸ್ತೀರ್ಣ 03 ಎಕರೆ 39 ಗುಂಟೆ ಜಮೀನು.
2. ದಾವಣಗೆರೆ ಸಿಟಿ, 4ನೇ ವಾರ್ಡ್, 6ನೇ ಡಿವಿಜನ್, ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಚಾಲ್ತಿ ಮುನ್ಸಿಪಲ್ ಡೋರ್ ನಂ. 401 ರಲ್ಲಿನ ವಾಣಿಜ್ಯ ಮಳಿಗೆ.
3. ದಾವಣಗೆರೆ ಸಿಟಿ, 3ನೇ ವಾರ್ಡ್, 5ನೇ ಡಿವಿಜನ್, ಕಡ್ಲೆಬಾಳು ನಂಜಪ್ಪ ಗಲ್ಲಿಯಲ್ಲಿರುವ ಹಳೆಯ ಮುನ್ಸಿಪಲ್ ಡೋರ್ ನಂ. 111/1 ರಿಂದ 5, ಚಾಲ್ತಿ ಮುನ್ಸಿಪಲ್ ಡೋರ್ ನಂ. 156/1 ರಿಂದ 5 ರಲ್ಲಿನ ವಾಸದ ಮನೆಗಳು.
4. ದಾವಣಗೆರೆ ಸಿಟಿ, 3ನೇ ವಾರ್ಡ್, 5ನೇ ಡಿವಿಜನ್, ಕಡ್ಲೆಬಾಳು ನಂಜಪ್ಪ ಗಲ್ಲಿಯಲ್ಲಿರುವ ಹಳೆಯ ಮುನ್ಸಿಪಲ್ ಡೋರ್ ನಂ. 110/1 ಮತ್ತು 2, ಚಾಲ್ತಿ ಮುನ್ಸಿಪಲ್ ಡೋರ್ ನಂ. 155/1 ಮತ್ತು 2 ರಲ್ಲಿನ ವಾಸದ ಮನೆಗಳು.
5. ದಾವಣಗೆರೆ ಸಿಟಿ, 4ನೇ ವಾರ್ಡ್, 6ನೇ ಡಿವಿಜನ್, ಇಸ್ಲಾಂಪೇಟೆಯಲ್ಲಿ ಬರತಕ್ಕ ಚಾಲ್ತಿ ಮುನ್ಸಿಪಲ್ ಡೋರ್ ನಂ. 558/1ಎ & 1ಬಿ ಮತ್ತು ಡೋರ್ ನಂ.558/2, 3, 4, & 5 ರಲ್ಲಿನ ವಾಸದ ಮನೆಗಳು.

ಎ.ಎಂ. ಹೆಗಡೆ, ವಕೀಲರು
# 82/18, 1st Floor, Next to Indian Bank,
P.B. Road, Davanagere. Mob: 94483 05888

|| ಶ್ರೀ ಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ







ಜನನ:
11.08.1963

ಲಿಂಗೈಕ್ಯ :
15.03.2022

ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ
**ಶ್ರೀ ಹೆಚ್.ಎಂ. ಉಮಾಪತಯ್ಯ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 15.03.2022ರ ಮಂಗಳವಾರ ಮಧ್ಯಾಹ್ನ 12.20ಕ್ಕೆ ನನ್ನ ಧರ್ಮಪತ್ನಿ

**ಶ್ರೀಮತಿ ವನಿತ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು**
ದಿನಾಂಕ 23.03.2022ನೇ ಬುಧವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು - ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

*ಇಂತಿ ದುಃಖತಪ್ತರು :*

**ಶ್ರೀ ಹೆಚ್.ಎಂ. ಮರುಳಸಿದ್ದಯ್ಯ ಮತ್ತು ಸಹೋದರರು**
**ಶ್ರೀ ಹೆಚ್.ಎಂ. ಉಮಾಪತಯ್ಯ ಮತ್ತು ಮಕ್ಕಳು**
**ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು**
**ಮಠದ ವಂಶಸ್ಥರು, ಹಳೇಬಾತಿ ಹಾಗೂ ಬಂಧು-ಮಿತ್ರರು.**

ಮೊಬೈಲ್: 98447 06560, 70195 73427

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆ ಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ ಯುವತಿಯರು ಬೇಕಾಗಿದ್ದಾರೆ. ವಯಸ್ಸು - 18 To 30 ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.
Quali : ಪಿಯುಸಿ ಪಾಸ್ / ಫೇಲ್
93804 69079

**ಮನೆ ಬಾಡಿಗೆಗಿದೆ**
ಸುಸಜ್ಜಿತ, ವಾಸ್ತು ಪ್ರಕಾರ ಉತ್ತರಾಭಿಮುಖವಾಗಿರುವ ವಿಶಾಲವಾದ ಹಾಲ್, ಕಿಚನ್, 2 ಬೆಡ್ ರೂಂ, ಪೂಜಾ ರೂಂ ಇರುವ ಏಳೂವರೆ ಚದುರವುಳ್ಳ, 24 ಗಂಟೆ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ಅನ್ನಪೂರ್ಣೇಶ್ವರಿ ದೇವಸ್ಥಾನದ ಹತ್ತಿರ ಬಾಡಿಗೆಗಿದೆ. ಸಂಪರ್ಕಿಸಿ.
79750 35395

**ನೆಲ ಮಳಿಗೆ ಬಾಡಿಗೆಗೆ ಇದೆ**
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786
98867-34802

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಬೇಕಾಗಿದ್ದಾರೆ**
ವೆಜ್ ಅಂಡ್ ನಾನ್‌ವೆಜ್ ಹೋಟೆಲ್‌ಗೆ ಭಟ್ಟರು ಬೇಕಾಗಿದ್ದಾರೆ.
99641 44744

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ಪಶ್ಚಿಮ, 40x70 ದಕ್ಷಿಣ ಬಾಲಾಜಿ ಬಡಾವಣೆಯಲ್ಲಿ 30x50 ಉತ್ತರ, ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ 20x30 ಪೂರ್ವ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 1BHK, 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ. ಸಂಪರ್ಕಿಸಿ
87623 12789
99722 44667

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಅನುಭವ ಹಾಗೂ ಅನುಭವ ಇಲ್ಲದವರಿಗೂ ಅವಕಾಶವಿದ್ದು, ಆಕರ್ಷಕ ವೇತನ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ :
ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್, ಪಿ.ಜೆ.ಬಡಾವಣೆ,ದಾವಣಗೆರೆ.
ಮೊ.94488 31396

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block
Beside Togataveera Kalyana Mantapa
96630 72555
Interview time : 11 AM

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ ಬಸವೇಶ್ವರ ಫಿಲ್ಲಿಂಗ್ ಸ್ಟೇಷನ್, ಭಾರತ್ ಪೆಟ್ರೋಲ್ ಲಿಮಿಟೆಡ್(BPCL), ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್, ದಾವಣಗೆರೆ.
94807 77338, 94821 09492

**ಸಂಪರ್ಕಿಸಿರಿ**
ಯಾವುದಾದರೂ ಕಾರ್ಪೆಂಟರ್ ಕೆಲಸವಿದ್ದರೆ ಸಂಪರ್ಕಿಸಿ
70229 52782

**WANTED**
Telecallers (F), Accoutant (M) Sales Officers (M/F), Works Manager (M), IT Technican, Software Testers /Developers
98444 92888

**ಮನೆ ಬಾಡಿಗೆಗೆ ಇದೆ**
2BHK ಮೊದಲನೇ ಮಹಡಿ, ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
94489 63300

**ಡ್ರೈವರ್ ಬೇಕಾಗಿದ್ದಾರೆ**
ಇನ್ನೋವಾ ಕಾರ್‌ಗೆ ಡ್ರೈವರ್ ಬೇಕಾಗಿದ್ದಾರೆ. ತತ್‌ಕ್ಷಣವೇ ಸಂಪರ್ಕಿಸಿ
98447 16058

**ಕೆಲಸಕ್ಕೆ ಬೇಕಾಗಿದ್ದಾರೆ**
ಮೊಬೈಲ್ ರಿಪೇರಿ ಬಲ್ಲವರಿಗೆ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ :
95385 38477
76761 32698

**ಮನೆ ಲೀಸ್‌ಗೆ ಇದೆ**
ಸರಸ್ವತಿ ಬಡಾವಣೆ ಟಿ.ವಿ ಸ್ಟೇಷನ್ ಹಿಂಭಾಗ ಎಲ್ಲಾ ಆಧುನಿಕ ಸೌಲಭ್ಯಗಳು ಇರುವ ಗ್ರೌಂಡ್ ಫ್ಲೋರ್ ಪೂರ್ವ ಫೇಸಿಂಗ್ ಹೊಸಮನೆ.
M : 99023 83936
M : 82172 14069
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ Sales Boys ಬೇಕಾಗಿದ್ದಾರೆ. (ಅನುಭವವುಳ್ಳವರಿಗೆ ಆದ್ಯತೆ)
77602 68105

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಹುಡುಗರು ಬೇಕಾಗಿದ್ದಾರೆ**
ದಾವಣಗೆರೆ ಮಸಾಲ ಮಂಡಕ್ಕಿ ಹೋಟೆಲ್‌ಗೆ ಹುಡುಗರು ಬೇಕಾಗಿದ್ದಾರೆ.
86603 84813
63636 44757

**ಬೇಕಾಗಿದ್ದಾರೆ**
ಲಿಂಗಾಯತರ ಮನೆಯಲ್ಲಿ ಲಿಂಗಾಯತ ಅಡುಗೆ ಮಾಡುವ ಮಹಿಳೆ ಬೇಕಾಗಿದ್ದಾರೆ.
82960 95119

**WANTED**
Office work - 1
Sales- 1
Technician Service - 1
THE MOBILE SHOP
ASHOKA & AVK ROAD, DVG.
90608 83886

**ಹೆಬ್ಬೇವು ಮರಗಳು ಮಾರಾಟಕ್ಕಿವೆ**
ದಾವಣಗೆರೆ ತಾ. ಕ್ಯಾತನಹಳ್ಳಿ ಸಮೀಪ ಅಂದಾಜು 250 ಮರಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99804 46808

**ಬೇಕಾಗಿದ್ದಾರೆ**
ಟೈಲರಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. ಸಹಾಯಕಿಯರು, ಬಿಲ್ಲಿಂಗ್ ಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ. ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ.
ಫೋ : 88614 38237

**ಮನೆ ಬಾಡಿಗೆಗೆ/ ಲೀಸ್‌ಗೆ ಇದೆ**
1 BHK, 2 BHK ಮನೆ ದೇವರಾಜ್ ಅರಸ್ ಬಡಾವಣೆ, ಸಿ ಬ್ಲಾಕ್, ದಾವಣಗೆರೆ.
70220 88338

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಮನ್, ಸೇಲ್ಸ್‌ಗರ್ಲ್ಸ್ ಬೇಕಾಗಿದ್ದಾರೆ.
ಸಂಪರ್ಕಿಸಿ : ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್ ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.
87622 21696

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಡೆಲಿವರಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ವಯಸ್ಸು : 20 ರಿಂದ 28 ವರ್ಷ
M : 97385 23711

**ಬೇಕಾಗಿದ್ದಾರೆ**
ಸ್ಕೂಲ್‌ವೇಟ್ ಕನ್ಸಲ್ಟೆನ್ಸಿ ಇದು ಒಂದು ಶೈಕ್ಷಣಿಕ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯದ ಉತ್ತಮ ಶಾಲೆಗಳಿಗೆ, ಶಿಕ್ಷಕ, ಶಿಕ್ಷಕಿ, ಪ್ರಾಂಶುಪಾಲರು, ಶಾಲಾ ಸಂಯೋಜಕರು, ಕಂಪ್ಯೂಟರ್ ಶಿಕ್ಷಕಿ, ಅಡ್ಮಿನ್ಸ್‌ಗಳು, ನರ್ಸ್‌ಗಳು, ಉಸ್ತುವಾರಿ ಅಧಿಕಾರಿಗಳು, ಇನ್ನು ಮುಂತಾದ ಹುದ್ದೆಗಳಿಗೆ ಉತ್ತಮ ವೇತನದೊಂದಿಗೆ ನೇಮಕಾತಿ ಮಾಡಲಾಗುತ್ತದೆ. ಹೆಚ್ಚಿನ ವಿವರಗಳಿಗಾಗಿ.
80739 40062, 73536 39111

**ಮನೆ ಬಾಡಿಗೆಗೆ ಇದೆ**
ಸಿದ್ಧವೀರಪ್ಪ ಬಡಾವಣೆ 12 'A' ಕ್ರಾಸ್ #1680/10 ರಲ್ಲಿ 2 ಬೆಡ್ ರೂಂವುಳ್ಳ ಪಶ್ಚಿಮ ಬಾಗಿಲಿನ RCC ಮನೆ ಬೋರ್‌ವೆಲ್, ಮುನ್ಸಿಪಲ್ ನೀರು, AEH ಸೌಕರ್ಯವುಳ್ಳ 15x50 ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ಇದೆ.
94806 67365, 94489 30345

**REQUIRED**
Require Marketing Executive for field work
KALPATARU PLYWOODS
# 6, 1st Main Road, S. Nijalingappa Layout, Near Lakshmi Floor Mills, Davanagere.
94498 11142, 94483 41142

**ಶಿಕ್ಷಕರು ಬೇಕಾಗಿದ್ದಾರೆ**
ಶ್ರೀ ಗುರುಕುಲ ವಿದ್ಯಾಸಂಸ್ಥೆ, ಸಿ.ಬಿ.ಎಸ್.ಇ ಶಾಲೆ, ತುರ್ಚಘಟ್ಟ. ಗಣಿತ, ವಿಜ್ಞಾನ, ಇಂಗ್ಲಿಷ್, ಗಣಕಯಂತ್ರ ವಿಷಯದಲ್ಲಿ ಪರಿಣತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತಿ ಇರುವವರು, ಈ ನಂಬರ್‌ಗೆ ಸಂಪರ್ಕಿಸಿ.
73386 04513, 73386 04512

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ವಿದ್ಯಾನಗರ, ದಾವಣಗೆರೆ.
ಸಂಪರ್ಕಿಸುವ ಸಮಯ :
ಬೆಳಿಗ್ಗೆ 11.00 ರಿಂದ ಸಂಜೆ 5.00 ರವರೆಗೆ
ಫೋ. : 08192 254736

**ಬೇಕಾಗಿದ್ದಾರೆ**
MRP ಲಿಕ್ಕರ್ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
ಶಾಮನೂರು ರೋಡ್,ದಾವಣಗೆರೆ.
76194 57200

**ಹುಡುಗರು ಬೇಕಾಗಿದ್ದಾರೆ**
ಪಾರ್ಟ್ ಟೈಮ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. (ಸಂಜೆ ವೇಳೆಗೆ)
The professional Couriers
PJ Extension,Davanagere.
70194 54648

**ಮನೆ ಬಾಡಿಗೆಗೆ ಇದೆ**
2BHK ನೆಲಮಹಡಿ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಕುವೆಂಪು ನಗರ, ಎಂಸಿಸಿ 'B' ಬ್ಲಾಕ್, ಎಸ್.ಎಸ್ ಮಾಲ್ ಹತ್ತಿರ. ಕಾರ್ಪೋರೇಷನ್ ವಾಟರ್, ಬೋರ್‌ವೆಲ್, ಸೋಲಾರ್ ಮತ್ತು ಕಾರ್ ಪಾರ್ಕಿಂಗ್ ಇದೆ.
ಸಂಪರ್ಕಿಸಿ : 97421 57455

**ಮನೆ ಬಾಡಿಗೆ/ಲೀಸ್‌ಗೆ ಇದೆ**
ಕೊಟ್ಟೂರೇಶ್ವರ ಬಡಾವಣೆ ನಿಟ್ಟುವಳ್ಳಿಯಲ್ಲಿ ಮೊದಲನೇ ಮಹಡಿಯಲ್ಲಿ ಪೂರ್ವ ದಿಕ್ಕಿನ ಕಮೋಡ್ ಸಿಸ್ಟಂ, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ / ಲೀಸ್‌ಗೆ ಇದೆ.
96634 65543

**ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ**
ಸಂಬಳ 9000, ಊಟ, ರೂಂ ಉಚಿತ
ಸಂಪರ್ಕಿಸಿ :
97400 98064, 97400 98047

**WANTED**
1) Branch Manager - Female Technical Graduates with Computer.
2) Marketing Pramotors /Executive Male / female with Technical background. Two wheeler must . send resume by whatsapp.
98800 38812
mail: guru196624@rediffmail.com

**WANTED TEACHERS**
B.A., B.Ed., (Kannada, History)-4
B.A., B.Ed., (English, History)-4
B.A. B.Ed., (Urdu, History)-4
B.Sc., B.Ed., (PCM-Kananda Medium)-4
B.Sc., B.Ed., (CBZ-Kananda Medium)-2
B.Sc., B.Ed., (CBZ- English Medium)-2
B.Sc., B.Ed., (CBZ-Urdu Medium)-2
ANJUM SCHOOL
Bhagath Singh Nagar, Davangere.
98805 11396
95381 21919

**SUMMER CAMP SBS NADIGER**
Essential English Coaching Centre
ಹೊಸ ಬ್ಯಾಚುಗಳ ಪ್ರಾರಂಭ
VI-X- ಬೆಳಿಗ್ಗೆ 7-8
III - VI ಬೆಳಿಗ್ಗೆ 8.15-9.15
ಕಾಲಾವಧಿ : 50 ದಿನಗಳು. 25.03.2022 ರಿಂದ
ಫ್ರೀ Class Notes + Practice Session
ಹೆಚ್ಚಿನ ವಿವರಗಳಿಗೆ ಖುದ್ದಾಗಿ ಸಂದರ್ಶಿಸಿರಿ
855/37, ಆಶೀರ್ವಾದ, II ಮೇನ್, VI A ಕ್ರಾಸ್, ಶ್ರೀ ಶಿವಕುಮಾರ ನಗರ, 1ನೇ ಹಂತ, ದಾವಣಗೆರೆ.
ಮೊ : 94498 55575, 87319 60339

# ಹರಿಹರದಲ್ಲಿ ಊರಮ್ಮ ದೇವಿ ಹಬ್ಬದ ಸಂಭ್ರಮ

**(1ನೇ ಪುಟದಿಂದ)** ಡಿ.ಜೆ. ಹಾಡಿಗೆ ಹೆಜ್ಜೆಗಳನ್ನು ಹಾಕಿ, ದೇವಿಗೆ ಜೈಕಾರ ಹಾಕಿದರು.

ಈ ಸಂದರ್ಭದಲ್ಲಿ ಶಾಸಕ ಎಸ್ ರಾಮಪ್ಪ, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು ಚೆನ್ನಬಸಪ್ಪ ಗೌಡ್ರು, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಪೌರಾಯುಕ್ತೆ ಎಸ್ ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್, ಪಿಸಿಐ ಸುನೀಲ್ ಬಸವರಾಜ್, ವೀರಬಸಪ್ಪ ಕುಸಲಾಪುರ, ಉತ್ಸವ ಸಮಿತಿಯ ಅಧ್ಯಕ್ಷ ಕೆ.ಅಣ್ಣಪ್ಪ, ಕಾರ್ಯದರ್ಶಿ ರೇವಣಸಿದ್ದಪ್ಪ, ಖಜಾಂಚಿ ಶೇರಾಪುರ ರಾಜಪ್ಪ, ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ಜಂಬಣ್ಣ ಗುತ್ತೂರು, ಪಿ.ಎನ್. ವಿರುಪಾಕ್ಷ, ಶಂಕರ್ ಖಟಾವ್ಕರ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಎಂ. ನಾಗೇಂದ್ರಪ್ಪ ವಕೀಲರು, ಗೌಡ್ರು ಪುಟ್ಟಪ್ಪ, ಟಿ .ಜೆ. ಮುರುಗೇಶಪ್ಪ, ಕೆ ಜಡಿಯಪ್ಪ, ಸುರೇಶ್ ಚಂದಾಪೂರ್, ಬಿ. ರೇವಣಸಿದ್ದಪ್ಪ, ಕೆ.ಬಿ. ರಾಜಶೇಖರ್, ರೇವಣಪ್ಪ, ಜಗದೀಶ್ ಚೂರಿ, ಚಿದಾನಂದ ಕಂಚಿಕೇರಿ, ಡಿ.ಯು. ಅರುಣ್ ಕುಮಾರ್, ಬಸವನಗೌಡ್ರು, ಬೆಳಕೇರಿ ಚಂದ್ರಪ್ಪ, ಡಿ. ಯು. ಸಿದ್ದೇಶ್, ಡಿ.ಯು. ಸಂಗಮೇಶ, ಪೂಜಾರ್ ಈರಣ್ಣ, ಎಂ.ಆರ್. ಚಂದ್ರಶೇಖರ್, ಅಶೋಕ, ಬಣಕಾರ ಸಿದ್ದಪ್ಪ, ಬಣಕಾರ ಆಂಜನೇಯ, ವಸಂತಕುಮಾರ್, ಜಿ.ಕೆ. ಮಲ್ಲಿಕಾರ್ಜುನ, ಕೆ.ರವಿಚಂದ್ರ, ಗುತ್ಯಪ್ಪ, ಕಂಚಿಕೇರಿ ಕರಿಬಸಪ್ಪ, ಜಗದೀಶ್ ನೀಲಗುಂದ, ಸುನಿಲ್, ಕಂಚಿಕೇರಿ ಅರುಣ್ ಕುಮಾರ್, ಅಣ್ಣಪ್ಪ ಶ್ಯಾವಿ, ಮಜ್ಜಿಗೆ ವೀರಭದ್ರಪ್ಪ, ಹೋವಳೆ ಹರೀಶ್, ತುಳಜಪ್ಪ ಭೂತೆ, ಅಶೋಕ ಭೂತೆ, ಸಿಂಗಾಡಿ ಮಂಜುನಾಥ್, ಸಿಂಗಾಡಿ ತಿಪ್ಪೇಶ್, ಬಸವರಾಜ್ ಪಾಟೀಲ್, ಕೃಷ್ಣ ರಾಜೊಳ್ಳಿ, ಪಾಲಾಕ್ಷಪ್ಪ, ಮೋಹನ್ ದುರುಗೋಜಿ, ಜಗದೀಶ್ ದುರಗೋಜಿ, ವೆಂಕಟೇಶ್, ಶಿವಪ್ರಕಾಶ್ ಶಾಸ್ತ್ರಿ, ಮಾರುತಿ ಶೆಟ್ಟಿ, ಕಿರಣ್ ಕುಮಾರ್ ಕಂಚಿಕೇರಿ, ಪೂಜಾರ್ ಹೇಮಣ್ಣ, ಹಾವನೂರು ಈರಣ್ಣ, ಬ್ಯಾಂಕ್ ನಾಗರಾಜ್, ಪ್ರಕಾಶ್, ಶಿವಕುಮಾರ್, ಸಿ.ಎನ್. ಹುಲುಗೇಶ್, ಶಿವಾನಂದ ನೀಲಗುಂದ ಹಾಗು ಇತರರು ಹಾಜರಿದ್ದರು.



ಹರಿಹರ ಊರಮ್ಮ ದೇವಿ ಜಾತ್ರೆ ಅಂಗವಾಗಿ ಚರಗಕ್ಕೆ ಜೋಳ ಬೇಯಿಸುತ್ತಿರುವುದು

## ತೈಲ, ಅನಿಲ ದರ ಹೆಚ್ಚಳ

**(1ನೇ ಪುಟದಿಂದ)** ಯಾದವ್ ಹೇಳಿಕೆ ನೀಡಿದ್ದು, ಬಿಜೆಪಿ ಸರ್ಕಾರದಿಂದ ಹಣದುಬ್ಬರದ ಮತ್ತೊಂದು ಕೊಡುಗೆ ದೊರೆತಿದೆ. ಲಖ್ನೌದಲ್ಲಿ ಸಿಲಿಂಡರ್ ಬೆಲೆ 1,000 ರೂ.ಗಳ ಹತ್ತಿರದಲ್ಲಿದೆ. ಪಾಟ್ನಾದಲ್ಲಿ 1,000 ರೂ. ಗಳಿಗೂ ಹೆಚ್ಚಾಗಿದೆ. ಚುನಾವಣೆ ಮುಗಿಯಿತು, ಹಣದುಬ್ಬರ ಆರಂಭವಾಯಿತು ಎಂದಿದ್ದಾರೆ.

ರಷ್ಯಾ ಹಾಗೂ ಉಕ್ರೇನ್ ನಡುವಿನ ಸಂಘರ್ಷದ ನಂತರ ಜಾಗತಿಕವಾಗಿ ಕಚ್ಚಾ ತೈಲದ ಬೆಲೆ ಹೆಚ್ಚಳವಾಗಿದೆ.

## ಬೇಡ ಜಂಗಮ ಹೆಸರಿನಲ್ಲಿ ಪ್ರಮಾಣ ಪತ್ರ

**(1ನೇ ಪುಟದಿಂದ)** ಮಹೇಶ್, ಲಿಂಗಾಯತ ಸಮುದಾಯದ ಪೂಜಾರಿಗಳೂ ಕೂಡ ಆದಿ ಕರ್ನಾಟಕ ಎಂದು ಪ್ರಮಾಣ ಪತ್ರ ಪಡೆಯುತ್ತಿದ್ದಾರೆ. ಅವರು ಬಸವಣ್ಣನ ಕಾಲದ ಬ್ರಾಹ್ಮಣರು. ಲಿಂಗಾಯತರಾದ ಮೇಲೆ ಅವರು ಸಸ್ಯಹಾರಿಗಳಾಗಿದ್ದಾರೆ. ಬೇಡ ಜಂಗಮರು ಮಾಂಸಾಹಾರಿಗಳು. ಅವರ ಭಾಷೆ ತೆಲುಗು, ಜಂಗಮರು ಕನ್ನಡ ಭಾಷಿಕರು ಎಂದರು.

ಶಾಸಕ ಗೂಳಿಹಟ್ಟಿ ಶೇಖರ್ ಮಾತನಾಡಿ, ಕೇಂದ್ರ ಸರ್ಕಾರ ಬೇಡ ಜಂಗಮರ ಕುರಿತು ಸಮಿತಿ ರಚನೆ ಮಾಡಿ ಅಧ್ಯಯನ ನಡೆಸಿದೆ. ಅದರ ಪ್ರಕಾರ ರಾಜ್ಯದಲ್ಲಿ ಕೇವಲ 3 ಸಾವಿರ ಬೇಡ ಜಂಗಮರಿದ್ದಾರೆ. ಅವರು ಮಾಂಸಾಹಾರಿಗಳು. ಅವರ ದೇವರು ತಿರುಪತಿ ಮತ್ತು ಆಂಧ್ರದ ಪೆದ್ದ ಗೋಸಾಯಿ. ವೀರಶೈವ ಜಂಗಮರ ದೇವರು ಶಿವ, ನಂದಿ, ಬಸವಣ್ಣ ಎಂದು ಹೇಳಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಉತ್ತರಿಸಿ, ಬೇಡ ಜಂಗಮರು ಯಾರು ಎಂಬುದನ್ನು ಪರಿಶೀಲಿಸಿ ತಹಶೀಲ್ದಾರರು ವರದಿ ನೀಡುತ್ತಾರೆ. ಈಗಾಗಲೇ ಯಾರಾದರೂ ಪ್ರಮಾಣ ಪತ್ರ ತೆಗೆದುಕೊಂಡಿದ್ದರೆ ಕೋರ್ಟ್‌ನಲ್ಲಿ ಪ್ರಶ್ನಿಸಲು ಅವಕಾಶ ಇದೆ. ಆ ರೀತಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದಿದ್ದರೆ, ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು. ಇದರಲ್ಲಿ ಸರ್ಕಾರ ರಾಜೀ ಇಲ್ಲ. ಈ ಬಗ್ಗೆ ಸಮಾಜ ಕಲ್ಯಾಣ ಇಲಾಖೆ ಮೂಲಕ ಪರಿಶೀಲನೆ ನಡೆಸಲಾಗುವುದು ಎಂದರು.

## ಮುಗಿಯದ ಜಿ.ಎಸ್.ಟಿ. ಸಮಸ್ಯೆಗಳು

**(1ನೇ ಪುಟದಿಂದ)** ಸಂಪರ್ಕಿಸಿ, ಲೆಕ್ಕಪತ್ರಗಳನ್ನು ಸರಿಯಾಗಿಟ್ಟುಕೊಳ್ಳಿ, ರಿಟರ್ನ್‌ಗಳನ್ನು ಸಮಯಕ್ಕೆ ಸರಿಯಾಗಿ ದಾಖಲಿಸಿ ತೊಂದರೆಗಳಿಂದ ದೂರವಿರಿ ಎಂಬ ಸಲಹೆಗಳು ಅಧಿಕಾರಿಗಳಿಂದ ಕೇಳಿ ಬಂದವು.

ನಗರದ ಬಾಪೂಜಿ ಎಂ.ಬಿ.ಎ. ಕಾಲೇಜಿನಲ್ಲಿ ವಾಣಿಜ್ಯ ಹಾಗೂ ಕೈಗಾರಿಕಾ ಛೇಂಬರ್, ಲೆಕ್ಕ ಪರಿಶೋಧಕರ ಒಕ್ಕೂಟ ಹಾಗೂ ತೆರಿಗೆ ಸಲಹೆಗಾರರ ಒಕ್ಕೂಟಗಳ ಜಂಟಿ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಈಶಾನ್ಯ ಆಯುಕ್ತಾಲಯದ ಸಿ.ಜಿ.ಎಸ್.ಟಿ. ಆಯುಕ್ತ ಪ್ರದೀಪ್ ಕುಮಾರ್ ಸುಮನ್, ತೆರಿಗೆ ಪಾವತಿದಾರರಿಂದಾಗಿ ನಮ್ಮೆಲ್ಲರ ಅಸ್ತಿತ್ವ ಇದೆ. ತೆರಿಗೆದಾರರನ್ನು ಗ್ರಾಹಕರಂತೆ ಕಾಣಬೇಕು, ಅವರ ಸಕಾರಣ ದೂರುಗಳನ್ನು ತ್ವರಿತವಾಗಿ ಬಗೆಹರಿಸಬೇಕು ಎಂದು ಹೇಳಿದರು.

ಸಿ.ಜಿ.ಎಸ್.ಟಿ. ಆಡಿಟ್ - 2 ಆಯುಕ್ತ ಎನ್.ಜೆ. ಕುಮಾರೇಶ್ ಮಾತನಾಡಿ, ಜಿ.ಎಸ್.ಟಿ. ಕಾರಣದಿಂದ ಬೇರೆ ಬೇರೆ ರಾಜ್ಯಗಳಲ್ಲಿ ವಹಿವಾಟು ನಡೆಸುವವರು ಏಕರೂಪದ ನಿಯಮಗಳನ್ನು ಪಾಲಿಸಲು ಸಾಧ್ಯವಾಗಿದೆ. ಜಿ.ಎಸ್.ಟಿ. ಅತಿ ದೊಡ್ಡ ಸುಧಾರಣೆಯಾಗಿದೆ. ರಾಜ್ಯಗಳ ನಿಲುವು ಗಳನ್ನು ಪಡೆದೇ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದರು.

ಸಾಕಷ್ಟು ಜನರು ಸರಕಿಗೆ ಹಣ ಕೊಟ್ಟು, ತೆರಿಗೆಗೆ ಹಣ ಕೊಡುವುದಿಲ್ಲ ಎನ್ನುತ್ತಾರೆ. ಆದರೆ, ತೆರಿಗೆ ಪಾವತಿಸುವುದು ಹೆಚ್ಚಾದಷ್ಟು ತೆರಿಗೆ ದರ ಕಡಿಮೆಯಾಗಿ ಎಲ್ಲರಿಗೂ ಅನುಕೂಲವಾಗುತ್ತದೆ ಎಂದರು.

ಎಸ್‌ಜಿಎಸ್‌ಟಿ ಜಂಟಿ ಆಯುಕ್ತ ಜಿ. ವಿಶ್ವನಾಥ್ ಮಾತನಾಡಿ, ಜಿಎಸ್‌ಟಿ ನಿಯಮಗಳು ಸರಳವಾಗಿ ಅರ್ಥವಾಗಲೆಂದು ಟ್ವಿಟ್ಟರ್‌ನಲ್ಲಿ 12 ವಿಡಿಯೋ ಕ್ಲಿಪ್‌ಗಳನ್ನು ಬಿಡಲಾಗಿದೆ. ಮಾಹಿತಿಯನ್ನು ಸಮ ರ್ಪಕವಾಗಿ ಅರಿತುಕೊಳ್ಳಬೇಕು ಎಂದು ಹೇಳಿದರು.

ಲೆಕ್ಕ ಪರಿಶೋಧಕ ಅಥಣಿ ವೀರಣ್ಣ ಮಾತನಾಡಿ, ಜಿಎಸ್‌ಟಿ ಜಾರಿಗೆ ತಂದಿದ್ದನ್ನು ಇನ್ನೂ ಸುಧಾರಿಸಿಕೊಳ್ಳಲು ಆಗಿಲ್ಲ. ಕೊರೊನಾದಿಂದ ಎರಡು ವರ್ಷ ಸಂಕಷ್ಟಕ್ಕೆ ಗುರಿಯಾಗಿರುವ ವ್ಯಾಪಾರಿಗಳಿಗೆ ಈಗ ನೋಟಿಸ್‌ಗಳನ್ನು ಕಳಿಸಲಾಗುತ್ತಿದೆ. ದಂಡ ವಿಧಿಸುವುದಿಲ್ಲ ಎಂಬ ಮೌಖಿಕ ಭರವಸೆಯನ್ನು ಉಲ್ಲಂಘಿಸಲಾಗುತ್ತಿದೆ ಎಂದು ಆಕ್ಷೇಪಿಸಿದರು.

ಈ ಸಂದರ್ಭದಲ್ಲಿ ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಮೋತಿ ವೀರಣ್ಣ, ಕಾರ್ಯದರ್ಶಿ ಶಂಭುಲಿಂಗಪ್ಪ, ಲೆಕ್ಕಪರಿಶೋಧಕರ ಒಕ್ಕೂಟದ ಅಧ್ಯಕ್ಷ ಕಿರಣ್ ಪಾಟೀಲ್, ತೆರಿಗೆ ಸಲಹೆಗಾರರ ಒಕ್ಕೂಟದ ಅಧ್ಯಕ್ಷ ಜಂಬಿಗಿ ರಾಧೇಶ್, ಗೌರವಾಧ್ಯಕ್ಷ ಬಿ.ಜಿ. ಬಸವರಾಜ್, ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಟ್ಯಾಕ್ಸ್ ಪ್ರಾಕ್ಟಿಷನರ್ಸ್ ಅಧ್ಯಯನ ಸಮಿತಿ ಅಧ್ಯಕ್ಷ ಹೆಚ್.ಟಿ. ಸುಧೀಂದ್ರ ರಾವ್ ಉಪಸ್ಥಿತರಿದ್ದರು.

ಜ್ಯೋತಿ ಹಾಗೂ ಗೀತ ಪ್ರಾರ್ಥಿಸಿದರು. ರಶೀದಾ ನಿರೂಪಿಸಿದರು. ರಾಮ್ಕಿ ವರ್ಮ ಸ್ವಾಗತಿಸಿದರು.

## ಪ್ರತಿಷ್ಠೆ ಬಿಟ್ಟು ಜನರ ಸೇವೆಗೆ ಮುಂದಾಗಬೇಕು : ಐಜಿಪಿ



**(1ನೇ ಪುಟದಿಂದ)** ಮಾತನಾಡಿದರು.

ಪ್ರತಿಷ್ಠೆ ಬಿಟ್ಟು ಸಾರ್ವಜನಿಕ ಸೇವೆಯನ್ನು ಮುಖ್ಯ ಧ್ಯೇಯವನ್ನಾಗಿ ಟ್ಟುಕೊಂಡು ಕರ್ತವ್ಯ ನಿರ್ವಹಿಸ ಬೇಕು. ಪೊಲೀಸ್ ಕೆಲಸಕ್ಕೆ ಸೇರಿದ ಬಳಿಕವೂ ಇಲಾಖೆಯ ಅನೇಕ ಪರೀಕ್ಷೆಗಳನ್ನು ಬರೆಯಬೇಕಾಗುತ್ತದೆ ಇದಕ್ಕೆ ಇಲಾಖೆ ಸಹಕಾರ ಇದ್ದೇ ಇರುತ್ತದೆ ಎಂದರು

ಸಮಾಜ ಬಹಳಷ್ಟು ಬದಲಾ ಗಿದೆ. ಸಾಮಾಜಿಕ ಜಾಲತಾಣ ಹೆಚ್ಚು ಕ್ರಿಯಾಶೀಲವಾಗಿದೆ. ಮಾನವ ಹಕ್ಕುಗಳ ಸಂಘಟನೆಗಳಿವೆ. ಸಾರ್ವ ಜನಿಕರು ಪೊಲೀಸ್ ಠಾಣೆಗೆ ಬಂದಾಗ ಅವರೊಂದಿಗೆ ಸೌಜನ್ಯ ದಿಂದ ವರ್ತಿಸುವ ಜೊತೆಗೆ ಅವರ ಸಮಸ್ಯೆಗಳಿಗೆ ಪರಿಹಾರ ನೀಡುವ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ಇಲಾಖೆಗೂ, ನಿಮಗೂ ಗೌರವ ದೊರೆಯಲಿದೆ ಎಂದು ಹೇಳಿದರು. ಕೇವಲ ಬಂದೋಬಸ್ತ್‌ನಲ್ಲಿ ಪಾಲ್ಗೊಳ್ಳುವುದಲ್ಲದೇ ಠಾಣೆಯಲ್ಲಿ ಕೇಸ್ ಡೈರಿ ಬರೆಯುವುದು, ಸೈಬರ್ ಕ್ರೈಮ್ ಟ್ರೇಸ್ ಔಟ್ ಮಾಡುವುದು, ಸೋಶಿಯಲ್ ಮೀಡಿಯಾ ಮಾನಿಟ ರಿಂಗ್ ಮಾಡುವ ಕೌಶಲ್ಯವನ್ನೂ ಸಹ ತಮ್ಮ ವೃತ್ತಿ ಜೀವನದಲ್ಲಿ ರೂಢಿ ಮಾಡಿಕೊಳ್ಳುವ ಅಗತ್ಯವಿದೆ ಎಂದರು.

**ಸರ್ವೋತ್ತಮ ಪ್ರಶಸ್ತಿ ಪ್ರದಾನ:** ಪ್ರಶಿಕ್ಷಣಾರ್ಥಿ ಬೆಂಗಳೂರು ಗ್ರಾಮಾಂತರ ವಿಭಾಗದ ಶಿವಾನಂದ ತರಬೇತಿ ವೇಳೆಯಲ್ಲಿ ಕ್ರೀಡಾ ಚಟುವಟಿಕೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿ 'ಸರ್ವೋತ್ತಮ' ಪ್ರಶಸ್ತಿಗೆ ಭಾಜನರಾದರು.

ಒಳಾಂಗಣ ಕ್ರೀಡೆಗಳಲ್ಲಿ ಪ್ರತಾಪ್‌ಕುಮಾರ್ ಪ್ರಥಮ, ಚೇತನಕುಮಾರ್ ದ್ವಿತೀಯ, ಬಿ.ಆರ್. ಸೋಮಶೇಖರ್ ತೃತೀಯ ಬಹುಮಾನ ಪಡೆದರು. ಹೊರಾಂಗಣ ಕ್ರೀಡೆಗಳಲ್ಲಿ ಶಿವಾನಂದ ಪ್ರಥಮ, ಎ.ಪಿ. ಉಮೇಶ್ ದ್ವಿತೀಯ, ಜಿ.ಎಸ್. ಸುನೀಲ್ ಕುಮಾರ್ ತೃತೀಯ ಸ್ಥಾನ ಪಡೆದುಕೊಂಡರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಬಿ. ಬಸರಗಿ, ಮೇಯರ್ ಜಯಮ್ಮ ಗೋಪಿನಾಯ್ಕ, ಉಪ ಮೇಯರ್ ಗಾಯತ್ರಿ ಬಾಯಿ, ನಿವೃತ್ತ ಪೊಲೀಸ್ ಅಧಿಕಾರಿಗಳಾದ ರವಿನಾರಾಯಣ, ಕೆ.ಎನ್. ಜಯಪ್ರಕಾಶ್, ಎಸ್.ಬಿ. ಪಾಟೀಲ್, ಕೌಲಾಪೂರ್, ಛಾಯಾಕುಮಾರಿ, ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

ದೇವರಾಜ್ ಸಂಗಾಹಳ್ಳಿ, ಶೈಲಜ ನಿರೂಪಿಸಿದರು. ತರಬೇತಿ ಶಾಲೆಯ ಉಪ ಪ್ರಾಚಾರ್ಯ, ಸಿಪಿಐ ಕೆ.ಬಿ. ಪ್ರಕಾಶ್ ವಂದಿಸಿದರು. ಕಾರ್ಯಕ್ರಮಕ್ಕೂ ಮುನ್ನ ಪ್ರಶಿಕ್ಷಣಾರ್ಥಿಗಳ ಆಕರ್ಷಕ ಪಥಸಂಚಲನ ನಡೆಯಿತು.

## ಬಂಡಿ ನಾಗರಾಜ್ ನಿಧನ




ದಾವಣಗೆರೆಯ ಕುರುಬಕೇರಿ ವಾಸಿ,
ಕಾಂಗ್ರೆಸ್ ಮುಖಂಡರೂ, ಕುರುಬ ಸಮಾಜದ ಮುಖಂಡರೂ ಆದ
**ಶ್ರೀ ಬಂಡಿ ನಾಗರಾಜ್**
ಅವರು ದಿನಾಂಕ 22.03.2022ರ ಮಂಗಳವಾರ ತಡರಾತ್ರಿ 1.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.03.2022ರ ಬುಧವಾರ ಮಧ್ಯಾಹ್ನ 2.30ಕ್ಕೆ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.
**ದುಃಖತಪ್ತ ಕುಟುಂಬ ವರ್ಗ - 80956 32324**

## ಶ್ರೀಮತಿ ವನಿತಮ್ಮ ನಿಧನ



ದಾವಣಗೆರೆ ಎಸ್.ಜೆ.ಎಂ. ನಗರ ರಿಂಗ್ ರಸ್ತೆ 18ನೇ ಕ್ರಾಸ್ ವಾಸಿ ಹರಲಿಪುರದ ಭೋವಿ ಹೆಚ್.ಇ ನಾಗರಾಜಪ್ಪ ಇವರ ಧರ್ಮಪತ್ನಿ ಶ್ರೀಮತಿ ವನಿತಮ್ಮ ಹರಲಿಪುರ (50) ಇವರು ದಿನಾಂಕ 22.03.2022ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ನಿಧನರಾಗಿದ್ದಾರೆ. ಪತಿ, ಮೂವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 23.03.2022ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

## ಹೊಸಕುಂದುವಾಡ ಗುಡ್ಡಪ್ಪ ಬಿ. ನಿಧನ



ದಾವಣಗೆರೆ ಸಿದ್ಧವೀರಪ್ಪ ಬಡಾವಣೆ, 4ನೇ ಕ್ರಾಸ್ ವಾಸಿ ಹೊಸಕುಂದವಾಡ ಗುಡ್ಡಪ್ಪ.ಬಿ (53) ಇವರು ದಿನಾಂಕ : 22.3.2022 ರ ಮಂಗಳವಾರ ಬೆಳಗಿನ ಜಾವ 3.15 ಕ್ಕೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು, ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 22.3.2022 ರ ಮಂಗಳವಾರ ಸಂಜೆ 4 ಗಂಟೆಗೆ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಹೊಸಕುಂದವಾಡ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಯಿತು.

**ಸಂಘ-ಸಂಸ್ಥೆ, NGO, ಟ್ರಸ್ಟ್‌ಗಳ GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.**
94838 62779

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**GST Registration,**
INCOME TAX Filing
Audit and for Maintenances
Contact :
Meghana Associates (R)
M : 99809 16126

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸಂಘ-ಸಂಸ್ಥೆ, ಟ್ರಸ್ಟ್ ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.**
Meghana Associates (R)
M : 99809 16126

**WANTED**
Receptionist - Female
Sale Executive - Female
Allotment & Insurance - Male
- Written & Verbal Communication Skills
- Customer Service
- Multitasking & Problem-solving
- Familiarity With Microsoft Office
- Ability To Work Under Pressure

Age Limit : Below 40
Good Salary (ESI,PF + Incentive)
SRINIVASA HONDA
Ph No : 8884445242

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 22.3.2022ರ ಮಂಗಳವಾರ ನಿಧನರಾದ
**ಶ್ರೀ ಬಿ. ಗುಡ್ಡಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
**ಕಿರಣ್ ಬೂಸ್ನೂರು, ರಿಯಲ್ ಎಸ್ಟೇಟ್ ಏಜೆಂಟ್**
**ಟಿ.ವಿ. ಬಸವರಾಜ್**

# ಹೆಣ್ಣುಮಕ್ಕಳ ಬದುಕಿಗೆ ಆಸರೆ

## ಗಚ್ಚಿನಮಠ ಮದ್ದರಕಿ ಸ್ವಾಮಿಗಳ ಶ್ಲಾಘನೆ



**ರಾಣೇಬೆನ್ನೂರು**

ರಾಣೇಬೆನ್ನೂರು,ಮಾ.22- ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ಸಭಾಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಒಕ್ಕೂಟಗಳ ಸಾಧನಾ ಸಮಾವೇಶ ಕಾರ್ಯಕ್ರಮ ನಡೆಸಲಾಯಿತು.

ಗಚ್ಚಿನಮಠ ಮದ್ದರಕಿ ಹಿರೇಮಠದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮಿಗಳು ಕಾರ್ಯಕ್ರಮ ಉದ್ಘಾಟನೆ ಮಾಡಿ ಹೆಣ್ಣುಮಕ್ಕಳ ಸ್ವಾವಲಂಬಿಗಳಾಗಿ ಬದುಕಲು ಅನೇಕ ಯೋಜನೆಗಳನ್ನು ರೂಪಿಸಿರುವುದನ್ನು ಶ್ಲಾಘಿಸಿದರು.

ಮಕ್ಕಳಿಗೆ ಉನ್ನತ ಮಟ್ಟದ ವಿದ್ಯಾಭ್ಯಾಸಕ್ಕಾಗಿ ಸುಜ್ಞಾನನಿಧಿ ಶಿಷ್ಯವೇತನ, ನಿರ್ಗತಿಕ ಕುಟುಂಬಗಳಿಗೆ ಮಾಸಾಶನ, ಕೆರೆಯ ಪುನಶ್ಚೇತನ ಕೆಲಸ ಹೀಗೆ ಹಲವಾರು ಕಾರ್ಯಕ್ರಮ ನಡೆಯುತ್ತಿದ್ದು, ಬ್ಯಾಂಕ್ ಮುಖೇನ ಮಹಿಳೆಯರಿಗೆ ಸಾಲ ಕೊಡುತ್ತಿರುವುದರಿಂದ, ಆ ಹಣದಿಂದ ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ ಎಂದು ಶ್ರೀಗಳು ನುಡಿದರು.

ಯೋಜನೆಯ ಜಿಲ್ಲಾ ನಿರ್ದೇಶಕ ನಾಗರಾಜ ಶೆಟ್ಟಿ, ಶ್ರೀಮತಿ ರುಕ್ಮಿಣಿ ಸಾಹುಕಾರ, ಶ್ರೀಮತಿ ವನಿತಾ ಗುತ್ತಲ, ಸಂತೋಷ ಪಾಟೀಲ, ನಿತ್ಯಾನಂದ ಕುಂದಾಪುರ, ಚನ್ನಬಸಪ್ಪ ಜಂಬಗಿ, ಪ್ರಭುಲಿಂಗಯ್ಯ ಕರ್ಜಗಿಮಠ ಉಪಸ್ಥಿತರಿದ್ದರು. ಸತೀಶ್ ಶೇಟ್ ಪ್ರಾಸ್ತಾವಿಕವಾಗಿ ಮಾತನಾಡಿದರು. ತಿಮ್ಮಪ್ಪ ನಿರೂಪಿಸಿದರು. ರವಿ ಸ್ವಾಗತಿಸಿದರು.

# ಭಗವದ್ಗೀತೆ ಜೊತೆಗೆ ಬಸವಣ್ಣನ ವಚನಗಳು ಪಠ್ಯ ಪುಸ್ತಕದಲ್ಲಿ ಬರಲಿ



ದಾವಣಗೆರೆ, ಮಾ. 19- ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತರುತ್ತಿರುವುದು ಮತ್ತು ಭಗವದ್ಗೀತೆಯ ಜೊತೆಗೆ ವಿಶ್ವಗುರು ಬಸವಣ್ಣನವರ ವಚನಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಲಿ ಎಂದು ದಾವಣಗೆರೆ ಜಿಲ್ಲಾ ಶೋಷಿತ ವರ್ಗಗಳ ಒಕ್ಕೂಟದ ಬಾಡದ ಆನಂದರಾಜ್ ಒತ್ತಾಯಿಸಿದ್ದಾರೆ.

ಭಗವದ್ಗೀತೆಯ ಸಾರಾಂಶ ಜೀವನಕ್ಕೆ ನೀತಿ ಪಾಠ ಹೇಳಿಕೊಟ್ಟರೆ, ಹನ್ನೆರಡನೆಯ ಶತಮಾನದಲ್ಲಿ ಅಪ್ಪಟ ಕನ್ನಡದಲ್ಲಿ ಸರಳವಾಗಿ ಮತ್ತು ಸಮಾಜದಲ್ಲಿನ ಅಜ್ಞಾನ, ಅಸ್ಪೃಶ್ಯತೆ, ಮೂಢನಂಬಿಕೆ, ಅನಿಷ್ಟ ಪದ್ಧತಿಗಳ ವಿರುದ್ಧ ಸಮರ ಸಾರಿದ ನಮ್ಮ ನಾಡಿನ ವಿಶ್ವಗುರು ಬಸವಣ್ಣನವರ ವಚನಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸುವುದರಿಂದ ಸಮಾಜದ ವಿದ್ಯಾರ್ಥಿಗಳಲ್ಲಿ ಸಮಗ್ರ ಸಾಮಾಜಿಕ ಕ್ರಾಂತಿ ಕಾಣಬಹುದು. ಅದೇ ರೀತಿ ವಚನಗಳನ್ನು ಸರಳವಾಗಿ ಅರ್ಥೈಸಿಕೊಳ್ಳಬಹುದು.

ಪಠ್ಯ ಪುಸ್ತಕಗಳಲ್ಲಿ ಜೀವನದ ಸಾರಾಂಶ, ದೇಶ ರಕ್ಷಿಸುವ ಕೆಲಸ, ಕೃಷಿಗೆ ಸಂಬಂಧಪಟ್ಟ ಮಾಹಿತಿಗಳು, ಸಮಾಜದಲ್ಲಿ ಸಾಮರಸ್ಯ ಮೂಡಿಸುವಂತ ವಿಚಾರಗಳು ಹಾಗೂ ಮಕ್ಕಳಲ್ಲಿ ಕಾಯಕವೇ ಕೈಲಾಸ ಮತ್ತು ಅರಿವೇ ಗುರು ಎಂಬ ಮೂಲ ಮಂತ್ರ ಕಲಿಸಬೇಕು.

ಈ ವಿಷಯಗಳು ಮುಖ್ಯವಾಹಿನಿಗೆ ಬರಲಿ ಎಂದು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಿಕ್ಷಣ ಸಚಿವ ನಾಗೇಶ್ ರಲ್ಲಿ ಬಾಡದ ಆನಂದರಾಜ್ ಒತ್ತಾಯಿಸಿದ್ದಾರೆ.

# ಶರಣ ಸಾಹಿತ್ಯ ಪರಿಷತ್‌ನಿಂದ ಇಂದು ಮಾಗನೂರು ಬಸಪ್ಪ ದತ್ತಿ ಉಪನ್ಯಾಸ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ವತಿಯಿಂದ ಇಂದು ಬೆಳಗ್ಗೆ 11 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಮಹಾಶರಣ ಲಿ.ಮಾಗನೂರು ಬಸಪ್ಪ ಮತ್ತು ಶರಣೆ ಲಿ.ಸರ್ವಮಂಗಳಮ್ಮ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕೆ.ಬಿ ಪರಮೇಶ್ವರಪ್ಪ ತಿಳಿಸಿದ್ದಾರೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಪರಿಷತ್‌ನ ಗೌರವಾಧ್ಯಕ್ಷರಾದ ಗದಗ ಜಿಲ್ಲೆ ಡಂಬಳದ ಡಾ.ಶ್ರೀ ತೋಟದ ಸಿದ್ದರಾಮ ಮಹಾಸ್ವಾಮಿಗಳು ವಹಿಸಲಿದ್ದಾರೆ. ಅಧ್ಯಕ್ಷ ರಾದ ಪ್ರೊ.ಮಲೆಯೂರು ಗುರುಸ್ವಾಮಿ ಉದ್ಘಾಟನೆ ನೆರವೇರಿಸಲಿದ್ದಾರೆ. ಶರಣ ಗೀತೆಯ ಸಿಡಿಯನ್ನು ಗೌರವ ಸಲಹೆಗಾರ ಡಾ.ಗೊ.ರು ಚನ್ನಬಸಪ್ಪ ಬಿಡುಗಡೆ ಮಾಡಲಿದ್ದಾರೆ.

ಅಧ್ಯಕ್ಷತೆಯನ್ನು ಗೌರವ ಅಧ್ಯಕ್ಷರಾದ ಡಾ.ಎಂ.ಜಿ ಈಶ್ವರಪ್ಪ ವಹಿಸಿಕೊಳ್ಳಲಿದ್ದಾರೆ. ಮಾಗನೂರು ಬಸಪ್ಪ ಅವರ ಕುರಿತು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಲಿದ್ದಾರೆ. ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಕೆ.ಬಿ ಪರಮೇಶ್ವರಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ದತ್ತಿದಾನಿ ಎಂ.ಬಿ. ಸಂಗಮೇಶ್ವರ ಗೌಡ, ನಿಕಟಪೂರ್ವ ಅಧ್ಯಕ್ಷ ಚಿಕ್ಕೋಳ್ ಈಶ್ವರಪ್ಪ, ಕದಳಿ ಮಹಿಳಾ ವೇದಿಕೆಯ ಜಿಲ್ಲಾಧ್ಯಕ್ಷರಾದ ಕುಸುಮಾ ಲೋಕೇಶ್ ಆಗಮಿಸಲಿದ್ದಾರೆ.

# ನಗರದಲ್ಲಿ ಇಂದು 'ಅಂತರಗಂಗೆ' ಕೃತಿ ಲೋಕಾರ್ಪಣೆ

ಜಾಗೃತ ಮಹಿಳಾ ಸಂಘ, ಕೌಟುಂಬಿಕ ಸಲಹಾ ಕೇಂದ್ರ ಮತ್ತು ಸ್ವಾಧಾರ ಗೃಹ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಅಂತರಗಂಗೆ ಕವನ ಸಂಕಲನ ಕೃತಿ ಲೋಕಾರ್ಪಣೆ ಸಮಾರಂಭವು ಜಾಗೃತ ಮಹಿಳಾ ಸಂಘದ ಕಚೇರಿಯಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ನಡೆಯುವುದು.

ಕಾರ್ಯಕ್ರಮವನ್ನು ಕೆ.ಹೆಚ್. ವಿಜಯಕುಮಾರ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಶಿಲ್ಪ ವೈ.ಎಸ್ ಹಾಗೂ ಡಾ. ದೀಪ್ತಿ ಎಂ.ಆರ್. ಆಗಮಿಸುವರು. ಪ್ರೊ. ಬಿ. ವಿಮಲದಾಸ್ ಅಧ್ಯಕ್ಷತೆ ವಹಿಸುವರು. ಹೆಚ್. ಕೆ. ಸತ್ಯಭಾಮ ಮಂಜುನಾಥ್ ರಚಿಸಿರುವ 'ಅಂತರ ಗಂಗೆ' ಕವನ ಸಂಕಲನ ಲೋಕಾರ್ಪಣೆಗೊಳ್ಳಲಿದೆ. ಅಮೀನಾಬಾನು ಲೋಕಾರ್ಪಣೆ ಮಾಡುವರು. ಕೃತಿ ಕುರಿತು ಪಾಪಗುರು ಮಾತನಾಡುವರು.

# ಯಲವಟ್ಟಿಯಲ್ಲಿ ಪುಣ್ಯಸಂಸ್ಮರಣೆ, ಪ್ರಣವ ಧ್ವಜಾರೋಹಣ



ಮಲೇಬೆನ್ನೂರು, ಮಾ.22- ಯಲವಟ್ಟಿ ಗ್ರಾಮದ ಶ್ರೀ ಗುರುಸಿದ್ಧಾಶ್ರಮದ ಬ್ರಹ್ಮಲೀನ ಸದ್ಗುರುಗಳಾದ ಶ್ರೀ ಶಿವಾನಂದ ಸ್ವಾಮೀಜಿ ಮತ್ತು ಶ್ರೀ ನಿತ್ಯಾನಂದ ಸ್ವಾಮೀಜಿ ಅವರ ಪುಣ್ಯಸಂಸ್ಮರಣೆ ಅಂಗವಾಗಿ ಭಾನುವಾರ ಬೆಳಿಗ್ಗೆ ಮಲೇಬೆನ್ನೂರು ಪಿಎಸ್‌ಐ ರವಿಕುಮಾರ್ ಅವರು ಪ್ರಣವ ಧ್ವಜಾರೋಹಣ ನೆರವೇರಿಸಿದರು.

ಇದಕ್ಕೂ ಮುನ್ನ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಗುರು ಕಲಶ ಸ್ಥಾಪನೆ, ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಶ್ರೀಮದ್ ಭಗವದ್ಗೀತಾ ಸಾಮೂಹಿಕ ಪಾರಾಯಣ ನಡೆದವು. ಶ್ರೀ ಗುರುಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ದಾವಣಗೆರೆಯ ಶ್ರೀ ಜಡೆಸಿದ್ದ ಶಿವಯೋಗೀಶ್ವರ ಮಠದ ಶ್ರೀ ಶಿವಾನಂದ ಸ್ವಾಮೀಜಿ, ಹದಡಿಯ ಚಂದ್ರಗಿರಿ ಮಠದ ಶ್ರೀ ಮುರಳೀಧರ ಸ್ವಾಮೀಜಿ, ದಾಗಿನಕಟ್ಟೆಯ ಸಿದ್ಧಾರೂಢ ಆಶ್ರಮದ ಶ್ರೀ ಕೃಷ್ಣಾನಂದ ಭಾರತಿ ಸ್ವಾಮೀಜಿ, ಬಸವಾಪಟ್ಟಣದ ಶ್ರೀ ಕೃಷ್ಣಾನಂದ ಸ್ವಾಮೀಜಿ, ಗ್ರಾಮದ ಹಿರಿಯರಾದ ಮುರುಗೆಪ್ಪ ಗೌಡ್ರು, ಜಿ. ಬಸಪ್ಪ ಮೇಷ್ಟ್ರು, ಜಿ. ಆಂಜನೇಯ, ಗ್ರಾ.ಪಂ. ಸದಸ್ಯ ಸಿದ್ದೇಶ್, ಹೊಸಮನಿ ಮಲ್ಲಪ್ಪ, ಹನುಮಂತಪ್ಪ, ನಿಟ್ಟೂರಿನ ಕೆ. ಸಂಜೀವಮೂರ್ತಿ, ಎನ್.ಜಿ. ಬಸವನಗೌಡ, ತಿಮ್ಮಣ್ಣ, ಜಿಗಳಿಯ ಜಿ. ಆನಂದಪ್ಪ, ಸಿರಿಗೆರೆಯ ಸಿದ್ದೇಶ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ಹೆಚ್.ಎಂ. ಸದಾನಂದ್, ಪಿಎಸಿಎಸ್ ಸಿಇಓ ಶೇಖರಪ್ಪ ಈ ವೇಳೆ ಹಾಜರಿದ್ದರು.

# ಹರಪನಹಳ್ಳಿ ತಾಲ್ಲೂಕು ಕ.ಸಾ.ಪ. ಕಾರ್ಯಕಾರಿ ಮಂಡಳಿಗೆ ನೇಮಕ

ಹರಪನಹಳ್ಳಿ, ಮಾ.22- ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಅನುಮೋದನೆ ಮೇರೆಗೆ, ಹರಪನಹಳ್ಳಿ ತಾಲ್ಲೂಕು ಘಟಕದ ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿದೆ ಎಂದು ಹರಪನಹಳ್ಳಿ ತಾಲ್ಲೂಕು ಘಟಕದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚೆಂಗೆಪ್ಪ ತಿಳಿಸಿದ್ದಾರೆ.

ಗೌರವ ಕಾರ್ಯದರ್ಶಿಗಳಾಗಿ ಡಿ.ಪದ್ಮರಾಜ ಜೈನ್, ಜಿ. ಮಹಾದೇವಪ್ಪ, ಗೌರವ ಕೋಶಾಧ್ಯಕ್ಷರಾಗಿ ಕೆ.ರಾಘವೇಂದ್ರಶೆಟ್ಟಿ, ಪರಿಶಿಷ್ಟ ಜಾತಿ ಪ್ರತಿನಿಧಿಗಳಾದ ಎಲ್.ಮಂಜ್ಯಾನಾಯ್ಕ, ವಿಶ್ವನಾಥ ಸೋಗಿ, ಪರಿಶಿಷ್ಟ ಪಂಗಡದ ಪ್ರತಿನಿಧಿ ತೆಲಿಗಿ ಕೆ.ಯೋಗೇಶ್, ಮಹಿಳಾ ಪ್ರತಿನಿಧಿಯಾಗಿ ಶ್ರೀಮತಿ ಎಂ. ಸುಭದ್ರಮ್ಮ, ಸಂಘ ಸಂಸ್ಥೆಗಳ ಪ್ರತಿನಿಧಿ ಬಸವರಾಜ ಸಂಗಪ್ಪನವರ್, ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ, ನಿಕಟ ಪೂರ್ವ ಅಧ್ಯಕ್ಷ ಡಿ.ರಾಮನಮಲಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಮಕ್ಬೂಬ್ ಭಾಷಾ, ಎಂ.ಎಂ. ಚಂದ್ರಪ್ಪ, ಲಕ್ಷ್ಮಿ ರಂಗಣ್ಣನವರ್, ಜಿ.ಪದ್ಮಲತಾ, ಪರಶೆಟ್ಟಿ ಕರಿಬಸಪ್ಪ, ಬಿ.ಎಂ.ನಾಗರಾಜ, ಇವರುಗಳನ್ನು ನೇಮಿಸಿದ್ದಾರೆ.

# ಬಯಸದಿದ್ದರೆ ಕೆಐಡಿಬಿ ಜಾಗ

(1ನೇ ಪುಟದಿಂದ) ಜಾರಿಯಲ್ಲಿಲ್ಲ ಎಂದು ಉಪ ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ರಾಜ್ಯದಲ್ಲಿ 83,058 ಎಕರೆಯನ್ನು ಕೈಗಾರಿಕಾ ಪ್ರದೇಶಕ್ಕೆ, 79,017 ಎಕರೆಯನ್ನು ಏಕ ಘಟಕ ಸಂಕೀರ್ಣ ಸೇರಿ ದಂತೆ ಒಟ್ಟು 1,62,000 ಎಕರೆಯನ್ನು ಕೆಐಎಡಿಬಿ ವಿವಿಧ ಜಿಲ್ಲೆ ಗಳಲ್ಲಿ ಸ್ವಾಧೀನಪಡಿಸಿಕೊಂಡಿದೆ ಎಂದು ನಿರಾಣಿ ವಿವರಿಸಿದರು.

# ವಿಶ್ವಾದ್ಯಂತ ಹೆಚ್ಚಿದ ಗೋಧಿ ಬೆಳೆ ಚಿಂತೆ

(1ನೇ ಪುಟದಿಂದ) ಅಮೆರಿಕದ ಉತ್ತರ ಡಕೋಟಾದ ರೈತ ಎಡ್ ಕೆಸೆಲ್ ಹೇಳಿದ್ದಾರೆ.

ಗೋಧಿ ಹಾಗೂ ಬಾರ್ಲಿ ರಫ್ತಿನಲ್ಲಿ ಉಕ್ರೇನ್ ಹಾಗೂ ರಷ್ಯಾ ಮೂರನೇ ಒಂದು ಪಾಲು ಹೊಂದಿವೆ. ಮಧ್ಯ ಪ್ರಾಚ್ಯ, ಏಷಿಯಾ ಹಾಗೂ ಆಫ್ರಿಕಾ ದೇಶಗಳು ಹೆಚ್ಚಾಗಿ ಗೋಧಿ ಆಮದು ಮಾಡಿಕೊಳ್ಳುತ್ತವೆ. ಸೂರ್ಯಕಾಂತಿ ರಫ್ತಿನಲ್ಲೂ ಉಕ್ರೇನ್ ಮುಂಚೂಣಿಯಲ್ಲಿದೆ.

ಅಮೆರಿಕ, ಕೆನಡ, ಫ್ರಾನ್ಸ್, ಭಾರತ, ಆಸ್ಟ್ರೇಲಿಯಾ ಹಾಗೂ ಅರ್ಜೆಂಟಿನಾಗಳು ಹೆಚ್ಚಾಗಿ ಗೋಧಿ ಬೆಳೆಯುತ್ತವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಗಿರುವ ಗೋಧಿ ಕೊರತೆಯನ್ನು ತ್ವರಿತವಾಗಿ ಬಳಸಿಕೊಳ್ಳುವ ಬಗ್ಗೆ ಈ ದೇಶಗಳು ಆಸಕ್ತಿ ಹೊಂದಿವೆ.

ಆದರೆ, ಇಂಧನ ಮತ್ತು ರಸಗೊಬ್ಬರ ಏರಿಕೆ ಹಾಗೂ ಕೊರೊನಾದಿಂದಾಗಿ ಪೂರೈಕೆ ಜಾಲದ ಮೇಲೆ ಪರಿಣಾಮ ವಾಗಿರುವುರಿಂದ ರೈತರ ಸಮಸ್ಯೆಗಳು ಉಲ್ಬಣಿಸಿವೆ.

ರಫ್ತು ಹಾಗೂ ಕೃಷಿ ಪದ್ಧತಿಗಳ ಮೇಲೆ ನಿರ್ಬಂಧಗಳಿರುವ ಕಾರಣ ಹೆಚ್ಚು ಬೆಳೆ ಬೆಳೆಯಲು ಅವಕಾಶ ಕ್ಷೀಣಿಸಿದೆ. ವಿಶ್ವ ಆಹಾರ ಯೋಜನೆಯ ಅನ್ವಯ 125 ದಶಲಕ್ಷ ಜನರಿಗೆ ಆಹಾರ ಒದಗಿಸಲಾಗುತ್ತದೆ. ಈ ಯೋಜನೆಯ ಸಾಕಷ್ಟು ಧಾನ್ಯ ಉಕ್ರೇನ್‌ನಿಂದ ಬರುತ್ತದೆ.

ಬೆಲೆ ಏರಿಕೆಯ ಜೊತೆಗೆ ಗೋಧಿ ರಫ್ತು ನಿಂತಿರುವುದರಿಂದ ಸಮಸ್ಯೆ ಭುಗಿಲೆದ್ದಿದೆ. ಲಕ್ಷಾಂತರ ಜನರು ಬಾಧಿತರಾಗಿದ್ದಾರೆ ಎಂದು ವಿಶ್ವ ಆರೋಗ್ಯ ಯೋಜನೆಯ ಕಾರ್ಯಕಾರಿ ನಿರ್ದೇಶಕ ಡೇವಿಡ್ ಬೀಸ್ಲೆ ಹೇಳಿದ್ದಾರೆ.

ರಷ್ಯಾ ಅತಿ ದೊಡ್ಡ ರಸಗೊಬ್ಬರ ರಫ್ತು ದೇಶವೂ ಆಗಿದೆ. ರಷ್ಯಾ ಮೇಲೆ ಹೇರಿರುವ ನಿರ್ಬಂಧಗಳು ಕೃಷಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಕೆನಡಾದಲ್ಲಿ ಬಿತ್ತನೆ ಅವಧಿ ಈಗಾಗಲೇ ಮುಗಿಯುತ್ತಾ ಬಂದಿದೆ. ಈ ಹಂತದಲ್ಲಿ ಬೆಳೆ ಪದ್ಧತಿ ಬದಲಿಸುವುದು ಕಷ್ಟ. ಅರ್ಜೆಂಟಿನಾ ಹಾಗೂ ಆಸ್ಟ್ರೇಲಿಯಾಗಳು ಗೋಧಿ ಬೆಳೆಯಲು ಉತ್ತೇಜನ ನೀಡಿದರೂ, ರೈತರು ಬೆಳೆ ಪದ್ಧತಿ ಬದಲಿಸಲು ಮನಸ್ಸು ಮಾಡುವ ಬಗ್ಗೆ ಪ್ರಶ್ನೆಗಳಿವೆ.

ಗೋಧಿಯ ಜೊತೆಗೆ ಇತರೆ ಕಾಳುಗಳ ಬೆಲೆಗಳೂ ಸಹ ಏರಿಕೆಯಾಗುತ್ತಿವೆ. ಹೀಗಾಗಿ ರೈತರು ಹೆಚ್ಚಿನ ಆದಾಯಕ್ಕಾಗಿ ಗೋಧಿಯನ್ನೇ ಅವಲಂಬಿಸಬೇಕಿಲ್ಲ.

ಮಧ್ಯ ಪ್ರಾಚ್ಯದಲ್ಲಿ ಕಳೆದ 20 ವರ್ಷಗಳಲ್ಲೇ ಅತ್ಯಂತ ತೀವ್ರ ಬರ ಪರಿಸ್ಥಿತಿ ಬಂದಿದೆ. ಹೀಗಾಗಿ ಈ ವಲಯದಲ್ಲೂ ಗೋಧಿ ಬೆಳೆಗೆ ಉತ್ತೇಜನ ಸಿಗುವ ಸಾಧ್ಯತೆಗಳಿಲ್ಲ.

# ಮಲೇಬೆನ್ನೂರಿನಲ್ಲಿ ಇಂದು ಗಂಧ, ನಾಳೆ ಉರುಸು

ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿಯವರ ಗಂಧ ಮತ್ತು ಉರುಸು ಇಂದು ಮತ್ತು ನಾಳೆ ಜರುಗಲಿದೆ. ಇಂದು ಮಧ್ಯಾಹ್ನ 3 ರಿಂದ ಪಟ್ಟಣದಲ್ಲಿ ಗಂಧದ ಮೆರವಣಿಗೆ ನಡೆಯಲಿದ್ದು, ನಾಳೆ ಗುರುವಾರ ಇಡೀ ದಿನ ಉರುಸು ಇರುತ್ತದೆ. ರಾತ್ರಿ 9 ಗಂಟೆಗೆ ಧರ್ಗಾ ಆವರಣದಲ್ಲಿ ಪ್ರಸಿದ್ಧ ಖವ್ವಾಲರಿಂದ ಖವ್ವಾಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

# ಅನುಭವ ಮಂಟಪ : ನಗರದಲ್ಲಿ ಇಂದು ಸಭೆ


ಕರ್ನಾಟಕ ಸರ್ಕಾರದಿಂದ ಬಸವ ಕಲ್ಯಾಣದಲ್ಲಿ ನಿರ್ಮಾಣವಾಗುತ್ತಿರುವ ನೂತನ ಅನುಭವ ಮಂಟಪದ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲು, ನಗರದ ಅನುಭವ ಮಂಟಪದಲ್ಲಿ ಮಾಹಿತಿ ವಿನಿಮಯ ಸಭೆಯನ್ನು ಇಂದು ಸಂಜೆ 5-30 ಕ್ಕೆ ಏರ್ಪಡಿಸಲಾಗಿದೆ.

ಸಭೆಯ ಸಾನ್ನಿಧ್ಯವನ್ನು ಶ್ರೀ ಬಸವ ಪ್ರಭು ಸ್ವಾಮೀಜಿ ವಹಿಸಲಿದ್ದಾರೆ. ಅನುಭವ ಮಂಟಪ ಯೋಜನೆಯ ಅಧ್ಯಕ್ಷ ಬಸವರಾಜ ಪಾಟೀಲ್ ಸೇಡಂ ಮಾತನಾಡಲಿದ್ದು, ಸಾಹಿತಿ ಗೊ.ರು. ಚನ್ನಬಸಪ್ಪ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಉಪಸ್ಥಿತರಿರುತ್ತಾರೆ.

# ಗುಡಾಳು : 28ಕ್ಕೆ ತೇರು

ದಾವಣಗೆರೆ, ಮಾ.22- ತಾಲ್ಲೂಕಿನ ಗುಡಾಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಇದೇ ದಿನಾಂಕ 28 ರ ಸೋಮವಾರ ಬೆಳಿಗ್ಗೆ 7.30 ಕ್ಕೆ ನಡೆಯಲಿದೆ. ದಿನಾಂಕ 24 ರ ಗುರುವಾರ ರಾತ್ರಿ 9 ಗಂಟೆಗೆ ಶ್ರೀ ಆಂಜನೇಯ ಸ್ವಾಮಿ ಕಂಕಣಧಾರಣೆ, 25 ರ ಶುಕ್ರವಾರ ಬೆಳಿಗ್ಗೆ 6.30 ಕ್ಕೆ ಸ್ವಾಮಿಗೆ ಅಭಿಷೇಕ.

# ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ ಕಾರ್ಯಕ್ರಮ



ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮವು ಸ್ಥಳೀಯ ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 11 ರವರೆಗೆ ನಡೆಯಲಿದೆ. ಕಣ್ಣಿಗೆ ಹನಿ ಹಾಕುವುದರಿಂದ ಕಣ್ಣಿನಲ್ಲಿ ನೀರು ಬರುವುದು, ಕಣ್ಣುರಿ, ಕಣ್ಣು ಕೆಂಪಾಗುವುದು, ಕಣ್ಣಿನ ಪೊರೆ ಬರುವ ಹಂತದಲ್ಲಿರುವವರು, ದೂರ ದೃಷ್ಟಿ, ಸಮೀಪ ದೃಷ್ಟಿ ತೊಂದರೆ ಇರುವವರು ಶಿಬಿರದಲ್ಲಿ ಭಾಗ ವಹಿಸಬಹುದು. ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದು ಕಡ್ಡಾಯ.

ವಿವರಕ್ಕೆ ವ್ಯವಸ್ಥಾಪಕ ಎಂ.ಮೋಕ್ಷಾನಂದ (94482-55 544), ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇ ಸ್ವಾಮಿ (98868-74078) ಅವರನ್ನು ಸಂಪರ್ಕಿಸಿ.

# ನಾಳೆ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಪಿಂಚಣಿ ಅದಾಲತ್

ದಾವಣಗೆರೆ, ಮಾ. 22- ನಿವೃತ್ತ ರಾಜ್ಯ ಸರ್ಕಾರಿ ನೌಕರರ ಪಿಂಚಣಿ ಅದಾಲತ್ತನ್ನು ನಾಡಿದ್ದು 24ರ ಗುರುವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ವರೆಗೆ ದಾವಣಗೆರೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಏರ್ಪಡಿಸಲಾಗಿದೆ. ಈ ಕುರಿತು ಕುಂದು-ಕೊರತೆಗಳೇನಾದರೂ ಇದ್ದಲ್ಲಿ ನಿವೃತ್ತ ರಾಜ್ಯ ಸರ್ಕಾರಿ ನೌಕರರು ತಮ್ಮ ಅಹವಾಲನ್ನು ಜಿಲ್ಲೆಯ ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ನಿರ್ವಹಣೆ ಇಲಾಖೆ ಕೊಠಡಿ ಸಂಖ್ಯೆ 43, ಜಿಲ್ಲಾಡಳಿತ ಭವನ, ದಾವಣಗೆರೆ, ಇವರಿಗೆ ಸಲ್ಲಿಸಿ, ಭಾಗವಹಿಸಬಹುದು.


# ನಗರದಲ್ಲಿ ಇಂದು 'ಜನ್ಮ ಭೂಮಿ', ಜನ್ಮದಾತರಿಗೊಂದು ನಮನ'

ಶ್ರೀ ಸೋಮೇಶ್ವರ ವಿದ್ಯಾಲಯ (ದಾವಣಗೆರೆ), ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯ (ಗೋಣಿವಾಡ) ಇವರ ಸಂಯುಕ್ತಾಶ್ರಯದಲ್ಲಿ ಇಂದು ಸಂಜೆ 5.45 ಕ್ಕೆ ದಾವಣಗೆರೆ ಸೋಮೇಶ್ವರ ವಿದ್ಯಾಲಯದ ಆವರಣದಲ್ಲಿ 'ಜನ್ಮ ಭೂಮಿ' ಮತ್ತು 'ಜನ್ಮದಾತರಿಗೊಂದು ನಮನ' ಕಾರ್ಯಕ್ರಮ ನಡೆಯಲಿದೆ. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಿವಮೊಗ್ಗ ವಿಧಾನ ಪರಿಷತ್ ಸದಸ್ಯ ಎಂ.ಬಿ. ಭಾನುಪ್ರಕಾಶ್ ದಿಕ್ಸೂಚಿ ನುಡಿ ನುಡಿಯಲಿದ್ದಾರೆ. ಡಾ.ಎ.ಹೆಚ್. ಶಿವಯೋಗಿಸ್ವಾಮಿ, ಎಸ್.ಜೆ. ಶ್ರೀಧರ್, ಡಾ. ಎನ್.ಕೆ. ಕಾಳಪ್ಪನವರ್, ಹೆಚ್.ಆರ್. ಅಶೋಕ ರೆಡ್ಡಿ ಅತಿಥಿಗಳಾಗಿದ್ದಾರೆ.

# ಎರೇಬೂದಿಹಾಳ್ : ಮಹಿಳಾ ದಿನಾಚರಣೆ

ಮಲೇಬೆನ್ನೂರು ಸಮೀಪದ ಎರೇಬೂದಿಹಾಳ್ ಗ್ರಾಮದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಬಾಲ್ಯ ವಿವಾಹ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

# ಶ್ರೀ ವೀರಭದ್ರೇಶ್ವರ ಸ್ವಾಮಿ ತೇರು



**ಹನಗವಾಡಿ**

ಹರಿಹರ ಸಮೀಪದ ಹನಗವಾಡಿ ಗ್ರಾಮದ ಆರಾಧ್ಯ ದೈವ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಮಂಗಳವಾರ ಸಂಜೆ ಸಂಭ್ರಮ ದಿಂದ ಜರುಗಿತು. ಬುಧವಾರ ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 12 ರವರೆಗೆ ಸ್ವಾಮಿಯ ಗುಗ್ಗಳ ಕಾರ್ಯಕ್ರಮ ನಡೆಯಲಿದ್ದು, ರಾತ್ರಿ 9.30ಕ್ಕೆ ಶ್ರೀ ರೇವಣ ಸಿದ್ದೇಶ್ವರ ನಾಟ್ಯ ಕಲಾ ಸಂಘದ ವರಿಂದ ಪರಶುರಾಮ ಬಣಕಾರ್ ವಿರಚಿತ 'ಕಣ್ಣಿಟ್ಟ ಕಳ್ಳನಾಯಕ' ಎಂಬ ಸಾಮಾಜಿಕ ನಾಟಕ ಪ್ರದರ್ಶನವಾಗಲಿದೆ.

# ಉತ್ತರಿಸುವುದು ಕಾನೂನು ಬಾಧ್ಯತೆ

(1ನೇ ಪುಟದಿಂದ) ಅರಿವಿರುವ ಮಟ್ಟಿಗೆ ಉತ್ತರಿಸಬೇಕು ಎಂದಿದ್ದಾರೆ. 2020ರ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರವರೆಗೆ ಜನಗಣತಿ ನಡೆಸ ಬೇಕಿತ್ತು. ಆದರೆ, ಕೊರೊನಾ ಕಾರಣದಿಂದಾಗಿ ಜನಗಣತಿ ಮುಂದೂಡಲಾಗಿದೆ.

# ಬೆಲೆ ಏರಿಕೆಗೆ ಪ್ರತಿಪಕ್ಷಗಳ ತರಾಟೆ

(1ನೇ ಪುಟದಿಂದ) ಹಿನ್ನೆಲೆ ಯಲ್ಲಿ ಬೆಲೆ ಏರಿಕೆಗೆ ತಡೆ ಯಾಗಿತ್ತು. ಚುನಾವಣೆ ನಂತರ ಬೆಲೆ ಏರಿಕೆಯ ನೋವನ್ನು ಜನ ಸಾಮಾನ್ಯರ ಮೇಲೆ ಹರಿ ಬಿಡಲಾಗುತ್ತಿದೆ ಎಂದು ಪ್ರತಿಪಕ್ಷಗಳು ಆರೋಪಿಸಿವೆ.


**ANVITH ENTERPRISES**
**FINANCIAL ADVISOR®**
P.J. EXTENSION, DAVANGERE-577 004.
1) ಸುರಕ್ಷಿತ ಮತ್ತು ಭದ್ರತೆಯೊಂದಿಗೆ ಹೂಡಿಕೆ ಮುಖಾಂತರ ವಾರ್ಷಿಕವಾಗಿ (8 ರಿಂದ 12%) ಲಾಭಾಂಶವನ್ನು ಪಡೆಯಲು
2) ಪ್ರತಿ ತಿಂಗಳ ಸಾಲದ EMI ನಿಂದ ಮುಕ್ತರಾಗಿ ಮಕ್ಕಳ ಶಿಕ್ಷಣ ಮತ್ತು ನಿಮ್ಮ ನಿವೃತ್ತಿ ಜೀವನದ ನೆಮ್ಮದಿಯ ದಿನಗಳಿಗಾಗಿ ಉಳಿತಾಯದ ಹೆಜ್ಜೆಗೆ ಸಾಗಲು Children's Savings Plans, Retirement Plans, Income-Tax Saving Plans, Health plans, Term Plans ಹಾಗೂ ಆರ್ಥಿಕವಾಗಿ ಸಬಲರಾಗಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
ಮೊ. ನಂ : 87926 73593



**ಶ್ರೀ ಕೆಂಚಾಂಬ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ**
ಕೆಂಚಾಂಬ ಸಂಕೀರ್ಣ, ಕಾಲೇಜು ರಸ್ತೆ, ನಿಟ್ಟುವಳ್ಳಿ, ದಾವಣಗೆರೆ - 577 004
**ಪಿಗ್ಮಿ ಏಜೆಂಟರು ಬೇಕಾಗಿದ್ದಾರೆ.**
ಈ ಮೇಲ್ಕಂಡ ಸಂಸ್ಥೆಯಲ್ಲಿ ದಿನವಹಿ ಪಿಗ್ಮಿ ಸಂಗ್ರಹಣೆಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು ಈ ಕೆಳಕಂಡ ನಿಬಂಧನೆಗೊಳಪಟ್ಟು. ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30.3.2022.
**ಅರ್ಹತೆಗಳು :**
1) ವಯೋಮಾನ ಕನಿಷ್ಠ 18 ವರ್ಷಗಳು, ಗರಿಷ್ಠ 50 ವರ್ಷಗಳು.
2) ವಿದ್ಯಾರ್ಹತೆ : ಕನಿಷ್ಠ ಎಸ್.ಎಸ್.ಎಲ್.ಸಿ.
3) ಪಿಗ್ಮಿ ಸಂಗ್ರಹಣೆ / ನಿರ್ವಹಣೆ ಬಲ್ಲವರಾಗಿರಬೇಕು.
"ನಿರ್ದೇಶಕ ಮಂಡಲಿಯ ಅಪ್ಪಣೆಯ ಮೇರೆಗೆ"
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
94484 48600 , 98440 05244



**ಪುರಸಭೆ ಕಾರ್ಯಾಲಯ,**
ಮಲೇಬೆನ್ನೂರು-577530
ಜಿಲ್ಲೆ : ದಾವಣಗೆರೆ, ರಾಜ್ಯ: ಕರ್ನಾಟಕ
**TOWN MUNICIPAL COUNCIL MALEBENNURU-577530**
Dist: Davanagere State: Karanataka
Phone: 08192 - 268858
Website: http;//www.malebennurutown.mrc.gov.in Email: itstaff_ulb_malebennuru@yahoo.com
ಕ್ರಮಾಂಕ/ಪುಸಮ/ಸಂತೆ ಹರಾಜು : ಸಿಆರ್ : 01 : 2021-22 ದಿನಾಂಕ : 22.03.2022

**ಬಹಿರಂಗ ಹರಾಜು ಪ್ರಕಟಣೆ**

ಮಲೇಬೆನ್ನೂರು ಸಮಸ್ತ ನಾಗರಿಕರಿಗೆ ತಿಳಿಯಪಡಿಸುವುದೇನೆಂದರೆ, 2022-23ನೇ ಸಾಲಿಗೆ ವಾರದ ಸಂತೆ ಮತ್ತು ದಿನವಹಿ ಸಂತೆ ಹಾಗೂ ಕುರಿ, ಕೋಳಿ, ಮಟನ್ ಮಾರುಕಟ್ಟೆಗಳನ್ನು ದಿನಾಂಕ : 01.04.2022 ರಿಂದ 31.03.2023ನೇ ಸಾಲಿನ ಅವಧಿಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸುಂಕ ವಸೂಲಿ ಮಾಡುವ ಹಕ್ಕನ್ನು ದಿನಾಂಕ : 29.03.2022ರ ಮಂಗಳವಾರ ಬೆಳಿಗ್ಗೆ 11.00 ಗಂಟೆಗೆ ಪುರಸಭಾ ಕಛೇರಿ ಸಭಾಂಗಣದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದು.

ಪ್ರಯುಕ್ತ, ಸದರಿ ಹರಾಜಿನಲ್ಲಿ ಭಾಗವಹಿಸುವವರು ದಿನಾಂಕ : 28.03.2022ರ ಸೋಮವಾರ ಮಧ್ಯಾಹ್ನ 4.30ರ ಒಳಗಾಗಿ ಈ ಕೆಳಗೆ ನಮೂದಿಸಿದ ವಿವಿಧ ಸಂತೆ ಮಾರುಕಟ್ಟೆಗಳಿಗೆ ಪ್ರತ್ಯೇಕವಾಗಿ ಠೇವಣಿ ಮೊತ್ತವನ್ನು ಡಿ.ಡಿ. ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಪ್ರಯುಕ್ತ ಆಸಕ್ತಿವುಳ್ಳವರು ಭಾಗವಹಿಸಲು ಕೋರಿದೆ.

| ಕ್ರ.ಸಂ. | ವಿವರ | ಕಟ್ಟಬೇಕಾದ ಠೇವಣಿ ಮೊತ್ತ |
|---|---|---|
| 1 | ವಾರದ ಸಂತೆ | 1,00,000/- |
| 2 | ದಿನವಹಿ ಸಂತೆ | 1,00,000/- |
| 3 | ಕುರಿ, ಕೋಳಿ, ಮಟನ್ ಮಾರುಕಟ್ಟೆ | 15,000/- |

ವಿಶೇಷ ಸೂಚನೆ : ಸದರಿ ಠೇವಣಿ ಮೊತ್ತವನ್ನು ಕಡ್ಡಾಯವಾಗಿ ಡಿ.ಡಿ. ಮೂಲಕವೇ ಸ್ವೀಕರಿಸಲಾಗುವುದು. ನಗದು ರೂಪದಲ್ಲಿ ಸಲ್ಲಿಸುವ ಠೇವಣಿಯನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/- **ಆಡಳಿತಾಧಿಕಾರಿ,** ಪುರಸಭೆ, ಮಲೇಬೆನ್ನೂರು ಸಹಿ/- **ಮುಖ್ಯಾಧಿಕಾರಿ,** ಪುರಸಭೆ, ಮಲೇಬೆನ್ನೂರು



**ಸಾರ್ವಜನಿಕ ಪ್ರಕಟಣೆ - ತಿದ್ದುಪಡಿ**

ಶ್ರೀಮತಿ ಹುಲಿಗೆಮ್ಮ ಗಂಡ ಹುಲಿಗೆಪ್ಪ, ಆದ ನಾನು ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ, ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ, ಅಣಜಿಗೆರೆ ಗ್ರಾಮದಲ್ಲಿ ನನ್ನ ಹೆಸರಿನಲ್ಲಿರುವ ಸರ್ವೇ ನಂಬರ್ 639/A ಜಮೀನಿಗೆ ಸಂಬಂಧಿಸಿದ ಈ ಕೆಳಕಂಡ ಮೂಲ ದಾಖಲೆಗಳನ್ನು ಕಳೆದುಕೊಂಡಿದ್ದೇನೆ.
1. ಮಹೇಶ್ವರಗೌಡ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯಪತ್ರ ದಿನಾಂಕ 20.03.2002 (SR No. 2294/2001-2002)
2. ಸುನಂದಮ್ಮ ಗಂಡ ಹನುಮಂತಪ್ಪ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯ ಪತ್ರ ದಿನಾಂಕ 17.07.2012 (CD No. HRPD45, 1308/2012-13)
3. ಎ. ಸತ್ಯನಾರಾಯಣ ಇವರ ಹೆಸರಿನಲ್ಲಿರುವ ನೋಂದಾಯಿತ ಜನರಲ್ ಪವರ್ ಆಫ್ ಅಟಾರ್ನಿ ದಿನಾಂಕ 03.05.2016 (6/2016-17, CD NO. HRPD88)
4. ಎಂ. ತಿಮ್ಮಣ್ಣ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯದ ಕರಾರು ಪತ್ರದ ದಿನಾಂಕ 03.05.2016 (580/2016-17)
5. ಎಂ. ತಿಮ್ಮಣ್ಣ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯದ ಕರಾರು ಪತ್ರದ ರದ್ಧತಿ ಪತ್ರ, ದಿನಾಂಕ : 01.12.2016 (4526/2016-17) ಈ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ, ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.
ವಿಳಾಸ : ಹುಲಿಗೆಮ್ಮ ಗಂಡ ಹುಲಿಗೆಪ್ಪ, ವಾಸ : # 852/1, ಮಲ್ಲಿಕಾರ್ಜುನ ದೇವಸ್ಥಾನದ ಎದುರು, ನ್ಯೂ ಬಂಬೂ ಬಜಾರ್, ದಾವಣಗೆರೆ. ದಾವಣಗೆರೆ ತಾಲ್ಲೂಕು, ದಾವಣಗೆರೆ ಜಿಲ್ಲೆ.
ದಿನಾಂಕ : 23.02.2022, ಸ್ಥಳ : ದಾವಣಗೆರೆ. ಮೊಬೈಲ್ : 94485-66523
ತಿದ್ದುಪಡಿ: ಈ ಪ್ರಕಟಣೆಯು ದಿನಾಂಕ 26.02.2022 ರ 'ಕನ್ನಡ ಪ್ರಭ' ಪತ್ರಿಕೆಯ 13ನೇ ಪುಟ ಮತ್ತು 'ಜನತಾವಾಣಿ' ಪತ್ರಿಕೆಯ 4ನೇ ಪುಟದಲ್ಲಿ ಪ್ರಕಟವಾಗಿದ್ದು, ಸದರಿ ಜಾಹೀರಾತಿನಲ್ಲಿ ಗಡಿಗುಡಾಳ್ ಎಂದು ಆಕಸ್ಮಿಕವಾಗಿ ತಪ್ಪಾಗಿದ್ದು, ಅದನ್ನು ಅಣಜಿಗೆರೆ ಎಂದು ತಿದ್ದಿ ಓದಿಕೊಳ್ಳಲು ವಿನಂತಿ.



**ಸಾರ್ವಜನಿಕ ಪ್ರಕಟಣೆ - ತಿದ್ದುಪಡಿ**


ಶ್ರೀ ಎ. ಸತ್ಯನಾರಾಯಣ ತಂದೆ ಸೂರ್ಯನಾರಾಯಣ, ಆದ ನಾನು ಸಾರ್ವಜನಿಕರಲ್ಲಿ ಕೇಳಿಕೊಳ್ಳುವುದೇನೆಂದರೆ ಹರಪನಹಳ್ಳಿ ತಾಲ್ಲೂಕು, ಅರಸೀಕೆರೆ ಹೋಬಳಿ, ಅಣಜಿಗೆರೆ ಗ್ರಾಮದಲ್ಲಿ ನನ್ನ ಹೆಸರಿನಲ್ಲಿರುವ ಸರ್ವೆ ನಂಬರ್ 639/B ಜಮೀನಿಗೆ ಸಂಬಂಧಿಸಿದ ಈ ಕೆಳಕಂಡ ಮೂಲ ದಾಖಲೆಗಳನ್ನು ಕಳೆದುಕೊಂಡಿದ್ದೇನೆ.
1. ಮಹೇಶ್ವರಗೌಡ ಇವರ ಹೆಸರಿನಲ್ಲಿರುವ ಮ್ಯುಟೇಷನ್ ನಂ. M13/93-94
2. ಎಸ್.ಕೆ. ಹನುಮಂತಪ್ಪ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯ ಪತ್ರ ದಿನಾಂಕ : 30.11.2010 (CD NO. HRPD 35, 1796/2010-11)
3. ಎ. ಸತ್ಯನಾರಾಯಣ ಇವರ ಹೆಸರಿನಲ್ಲಿರುವ ನೋಂದಾಯಿತ ಜನರಲ್ ಪವರ್ ಆಫ್ ಅಟಾರ್ನಿ ದಿನಾಂಕ : 03.05.2016 (7/2016-17, CD.NO. HRPD 88)
4. ಎಂ. ತಿಮ್ಮಣ್ಣ ಇವರ ಹೆಸರಿನಲ್ಲಿರುವ ನೋಂದಾಯಿತ ಕ್ರಯದ ಕರಾರು ಪತ್ರ ದಿನಾಂಕ : 03.05.2016 (581/2016-17, CD NO. HRPD88) ಈ ದಾಖಲೆಗಳು ಯಾರಿಗಾದರೂ ಸಿಕ್ಕಲ್ಲಿ, ಈ ಕೆಳಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ.
ವಿಳಾಸ : ಎ. ಸತ್ಯನಾರಾಯಣ ತಂದೆ ಸೂರ್ಯನಾರಾಯಣ, ವ್ಯವಸಾಯ, ವಾಸ ಶ್ರೀನಿವಾಸನಗರ ಕ್ಯಾಂಪ್, ಮಲ್ಲನಾಯ್ಕನಹಳ್ಳಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
ದಿನಾಂಕ : 23.02.2022, ಸ್ಥಳ : ದಾವಣಗೆರೆ. ಮೊಬೈಲ್ : 94800-65665, 94485-66523
ತಿದ್ದುಪಡಿ: ಈ ಪ್ರಕಟಣೆಯು ದಿನಾಂಕ 26.02.2022 ರ 'ಕನ್ನಡ ಪ್ರಭ' ಪತ್ರಿಕೆಯ 13ನೇ ಪುಟ ಮತ್ತು 'ಜನತಾವಾಣಿ' ಪತ್ರಿಕೆಯ 4ನೇ ಪುಟದಲ್ಲಿ ಪ್ರಕಟವಾಗಿದ್ದು, ಸದರಿ ಜಾಹೀರಾತಿನಲ್ಲಿ ಗಡಿಗುಡಾಳ್ ಎಂದು ಆಕಸ್ಮಿಕವಾಗಿ ತಪ್ಪಾಗಿದ್ದು, ಅದನ್ನು ಅಣಜಿಗೆರೆ ಎಂದು ತಿದ್ದಿ ಓದಿಕೊಳ್ಳಲು ವಿನಂತಿ




ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು (ರಿ.), ಮೈಸೂರು
ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ದಾವಣಗೆರೆ.
**ಮಹಾಶರಣ ಲಿಂ. ಮಾಗನೂರು ಬಸಪ್ಪ ಮತ್ತು ಶರಣೆ ಲಿಂ. ಸರ್ವಮಂಗಳಮ್ಮ ಸ್ಮರಣೆ ದತ್ತಿ ಉಪನ್ಯಾಸ ಕಾರ್ಯಕ್ರಮ**
ದಿನಾಂಕ : 23.03.2022ನೇ ಬುಧವಾರ, ಸಮಯ : ಬೆಳಿಗ್ಗೆ 11.00 ಗಂಟೆಗೆ
ಸ್ಥಳ : ಕುವೆಂಪು ಕನ್ನಡ ಭವನ, ವಿದ್ಯಾನಗರ ಮುಖ್ಯರಸ್ತೆ, ದಾವಣಗೆರೆ-04.
ದಿವ್ಯ ಸಾನ್ನಿಧ್ಯ:
ಜಗದ್ಗುರು ಡಾ. ಶ್ರೀ ಶ್ರೀ ತೋಂಟದ ಸಿದ್ಧರಾಮ ಮಹಾಸ್ವಾಮಿಗಳು, ಡಂಬಳ, ಗದಗ
ಗೌರವಾಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು
ಉದ್ಘಾಟನೆ : ಶರಣ ಪ್ರೊ. ಮಲೆಯೂರು ಗುರುಸ್ವಾಮಿ, ಅಧ್ಯಕ್ಷರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.
ಶರಣ ಗೀತೆ ಸಿ.ಡಿ. ಬಿಡುಗಡೆ : ಶರಣ ಡಾ. ಗೊ.ರು. ಚನ್ನಬಸಪ್ಪ, ಗೌರವ ಸಲಹೆಗಾರರು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.
ಅಧ್ಯಕ್ಷತೆ : ಶರಣ ಡಾ. ಎಂ.ಜಿ. ಈಶ್ವರಪ್ಪ, ಗೌರವಾಧ್ಯಕ್ಷರು, ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು.
ಮಾಗನೂರು ಬಸಪ್ಪ ಅವರ ಕುರಿತು : ಶರಣ ಬಿ. ವಾಮದೇವಪ್ಪ, ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು.
ಪ್ರಾಸ್ತಾವಿಕ ನುಡಿ : ಶರಣ ಕೆ.ಬಿ. ಪರಮೇಶ್ವರಪ್ಪ, ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು.
ಮುಖ್ಯ ಅತಿಥಿಗಳು : ಶರಣ ಎಂ.ಬಿ. ಸಂಗಮೇಶ್ವರ ಗೌಡರು, ದತ್ತಿ ದಾನಿಗಳು, ದಾವಣಗೆರೆ.
ಶರಣ ಚಿಕ್ಕೋಳ್ ಈಶ್ವರಪ್ಪ, ನಿಕಟ ಪೂರ್ವ ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು.
ಶರಣೆ ಕುಸುಮಾ ಲೋಕೇಶ್, ಅಧ್ಯಕ್ಷರು, ದಾವಣಗೆರೆ ಜಿಲ್ಲಾ ಕದಳಿ ಮಹಿಳಾ ವೇದಿಕೆ
ವಚನ ಗಾಯನ : ಕದಳಿ ಮಹಿಳಾ ವೇದಿಕೆ, ದಾವಣಗೆರೆ. ನೇತೃತ್ವ : ಶರಣೆ ಯಶಾ ದಿನೇಶ್
ಶರಣು ಬನ್ನಿ.... ಅಧ್ಯಕ್ಷರು ಮತ್ತು ಸದಸ್ಯರು, ದಾವಣಗೆರೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು.

# ಎಲೆಬೇತೂರಿನಲ್ಲಿ 11ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಿದ್ಧತೆ

- ಜಿಲ್ಲೆಯ ಹಿರಿಯ ಸಾಹಿತಿ ಜಿ.ಎಸ್. ಸುಶೀಲಾದೇವಿ ಆರ್. ರಾವ್ ಸಮ್ಮೇಳನಾಧ್ಯಕ್ಷೆ.
- ಎರಡು ದಿನಗಳ ಸಮ್ಮೇಳನದಲ್ಲಿ ಪ್ರಚಲಿತ ವಿಷಯಗಳ ಕುರಿತಂತೆ ಗೋಷ್ಠಿಗಳು.
- ತರಳಬಾಳು ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ರಾಜ್ಯ ಕಸಾಪ ಅಧ್ಯಕ್ಷ ಡಾ. ಮಹೇಶ್ ಜೋಶಿ ಅವರಿಂದ ಸಮ್ಮೇಳನದ ಉದ್ಘಾಟನೆ.
- ಹಿರಿಯ ಸಾಹಿತಿಗಳಾದ ಡಾ. ಶಂಭು ಬಳಿಗಾರ, ಕಾಳೇಗೌಡ ನಾಗವಾರ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳು.
- 18 ಎಕರೆ ವಿಸ್ತೀರ್ಣದ ಮಾಗಾನಹಳ್ಳಿ ಅಂಬಾಸಪ್ಪನವರ ಮೈದಾನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ 200x100 ಅಡಿಯ ಸಭಾಂಗಣದಲ್ಲಿ 40x60 ಅಡಿಯ ವೇದಿಕೆ ನಿರ್ಮಾಣ.
- ದಾವಣಗೆರೆಯ ನಾಲ್ಕು ಭಾಗಗಳಿಂದ ಎಲೆಬೇತೂರಿಗೆ ಸಾರಿಗೆ ಬಸ್ ವ್ಯವಸ್ಥೆ.



ದಾವಣಗೆರೆ, ಮಾ. 22- ಇದೇ ದಿನಾಂಕ 26 ಹಾಗೂ 27 ರಂದು ಎಲೆಬೇತೂರು ಗ್ರಾಮದಲ್ಲಿ ನಡೆಯಲಿರುವ 11ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, 26ರ ಬೆಳಿಗ್ಗೆ 8.30ಕ್ಕೆ ಧ್ವಜಾರೋಹಣ ಕಾರ್ಯಕ್ರಮಗಳು ನಡೆಯಲಿವೆ. ಸಮ್ಮೇಳನದ ಅಧ್ಯಕ್ಷರನ್ನಾಗಿ ಸಾಹಿತಿ ಜಿ.ಎಸ್. ಸುಶೀಲಾ ದೇವಿ ಆರ್. ರಾವ್ ಅವರನ್ನು ಆಯ್ಕೆ ಮಾಡಲಾಗಿದ್ದು, 9 ಗಂಟೆಗೆ ಕಲಾ ತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದ್ದು, ಎಸ್ಪಿ ಸಿ.ಬಿ. ರಿಷ್ಯಂತ್ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ ಎಂದರು.

ಬೆಳಗ್ಗೆ 11 ಗಂಟೆಗೆ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಸಮ್ಮೇಳನ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ, ನಾಡೋಜ ಡಾ. ಮಹೇಶ್ ಜೋಶಿ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಶಾಸಕ ಎಸ್.ಎ. ರವೀಂದ್ರನಾಥ ಅಧ್ಯಕ್ಷತೆ ವಹಿಸುವರು. ಸಂಸದ ಜಿ.ಎಂ. ಸಿದ್ದೇಶ್ವರ, ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರಪ್ಪ, ಪ್ರೊ. ಲಿಂಗಣ್ಣ, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಾಹಿತಿ ಕಾಳೇಗೌಡ ನಾಗವಾರ ಮತ್ತಿತರರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ದಾವಣಗೆರೆ ಜಿಲ್ಲೆಯ ಚಾರಿತ್ರಿಕ ಸಂಗತಿಗಳ ಕುರಿತು ಪ್ರಥಮ ಗೋಷ್ಠಿ ನಡೆಯಲಿದೆ. 3.30ಕ್ಕೆ 'ರೈತ ಉತ್ಪಾದಕ ಕಂಪನಿ-ಅವಕಾಶಗಳು ಮತ್ತು ಸವಾಲುಗಳು' ವಿಶೇಷ ಉಪನ್ಯಾಸ ನಡೆಯಲಿದೆ. ಸಂಜೆ 4 ಕ್ಕೆ ನೂತನ ಶಿಕ್ಷಣ ನೀತಿ ಮತ್ತು ಕನ್ನಡ ಕುರಿತು 2ನೇ ಗೋಷ್ಠಿ ನಡೆಯಲಿದ್ದು, ಸಂಜೆ 5.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ದಿನಾಂಕ 27ರ ಭಾನುವಾರ ಬೆಳಿಗ್ಗೆ 8.30ಕ್ಕೆ ನಾಡು-ನುಡಿ ಗೀತೆ ಗಾಯನ. 9 ಗಂಟೆಗೆ ಕವಿಗೋಷ್ಠಿ ನಡೆಯಲಿದೆ. 11 ಗಂಟೆಗೆ ಸಾಹಿತ್ಯ ವೈವಿಧ್ಯ ಕುರಿತು 4ನೇ ಗೋಷ್ಠಿ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಜಿ.ಎಸ್. ಸುಶೀಲಾದೇವಿ ಆರ್. ರಾವ್ ಅವರ ಬದುಕು-ಬರಹ ವಿಶೇಷ ಉಪನ್ಯಾಸ. 3.30ಕ್ಕೆ ರಜತ ವರ್ಷದ ದಾವಣಗೆರೆ ಜಿಲ್ಲೆ ಹಿನ್ನೋಟ-ಮುನ್ನೋಟ ವಿಶೇಷ ಉಪನ್ಯಾಸ ಹಾಗೂ ಮಧ್ಯಾಹ್ನ 3 ಗಂಟೆಗೆ ಕನ್ನಡ-ಕನ್ನಡಿಗ-ಕರ್ನಾಟಕ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ನಡೆಯಲಿವೆ.

ಸಂಜೆ 4 ಗಂಟೆಗೆ ಬಹಿರಂಗ ಅಧಿವೇಶನ ನಡೆಯಲಿದೆ. 4.30ಕ್ಕೆ ಸನ್ಮಾನ ಮತ್ತು ಸಮಾರೋಪ ಕಾರ್ಯಕ್ರಮ ನಡೆಯಲಿದ್ದು, ಡಾ.ಶಂಭು ಬಳಿಗಾರ ಸಮಾರೋಪ ನುಡಿಗಳನ್ನಾಡಲಿದ್ದಾರೆ. ವಿವಿಧ ಗಣ್ಯರಿಗೆ ಸನ್ಮಾನಿಸಲಾಗುವುದು. ಸಂಜೆ 6.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು. ದಾವಣಗೆರೆಯ ನಾಲ್ಕು ಭಾಗಗಳಿಂದ ಎಲೆಬೇತೂರಿಗೆ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಲಾಗುವುದು.

18 ಎಕರೆ ವಿಸ್ತೀರ್ಣದ ಮಾಗಾನಹಳ್ಳಿ ಅಂಬಾಸಪ್ಪನವರ ಮೈದಾನದಲ್ಲಿ ನಡೆಯುವ ಕಾರ್ಯಕ್ರಮಕ್ಕೆ 200x100 ಅಡಿಯ ಸಭಾಂಗಣದಲ್ಲಿ 40x60 ಅಡಿಯ ವೇದಿಕೆ ನಿರ್ಮಿಸಲಾಗುತ್ತಿದೆ. 15ರಿಂದ 20ಕ್ಕೂ ಹೆಚ್ಚು ಮಳಿಗೆಗಳನ್ನು ತೆರೆಯಲಾಗಿದ್ದು, ಪುಸ್ತಕ ಮಾರಾಟಕ್ಕೆ ಆದ್ಯತೆ ನೀಡಲಾಗಿದೆ ಎಂದು ಕಸಾಪ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ತಿಳಿಸಿದರು.

ಎಲೆಬೇತೂರು ಗ್ರಾಮದ ಮುಖಂಡ ಬಸವರಾಜಪ್ಪ ಮಾತನಾಡುತ್ತಾ, ಸಮ್ಮೇಳನದ ಎರಡು ದಿನಗಳ ಕಾಲ ಬೆಳಗ್ಗೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ಭೋಜನದ ವ್ಯವಸ್ಥೆ ಮಾಡಲಾಗಿದೆ. ಮೊದಲ ದಿನ ಬೆಳಗ್ಗಿನ ಉಪಹಾರದಲ್ಲಿ ಪಲಾವು, ಮಧ್ಯಾಹ್ನ ಭೋಜನಕ್ಕೆ ಗೋಧಿ ಪಾಯಸ, ಕರದಂಟು, ಚಿತ್ರಾನ್ನ, ಅನ್ನ-ಸಾಂಬಾರು, ಮಿರ್ಚಿ, ಪಲ್ಯ. ಎರಡನೇ ದಿನ ಬೆಳಗ್ಗೆ ಉಪ್ಪಿಟ್ಟು, ಚಿತ್ರಾನ್ನ, ಮಧ್ಯಾಹ್ನ ಚಪಾತಿ ಪಲ್ಯ, ಶಾವಿಗೆ ಪಾಯಸ, ಚಿತ್ರಾನ್ನ, ಈರುಳ್ಳಿ ಬಜೆ, ಅನ್ನ ಸಾಂಬಾರು ಇರಲಿದೆ. ರಾತ್ರಿ ಊಟಕ್ಕೆ ಅನ್ನ ಸಾಂಬಾರು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು. ಪ್ರತಿದಿನ ಬೆಳಗ್ಗೆ 1500 ಜನರಿಗೆ ತಿಂಡಿ, ಮಧ್ಯಾಹ್ನ ಮೂರು ಸಾವಿರ ಜನರಿಗೆ ಊಟದ ವ್ಯವಸ್ಥೆ ಮಾಡಲಾಗುವುದು. ಜೊತೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದೇವೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪರಿಷತ್‌ನ ಗೌರವ ಕಾರ್ಯದರ್ಶಿಗಳಾದ ಬಿ. ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಮಾಜಿ ಜಿಲ್ಲಾಧ್ಯಕ್ಷ ಎ.ಆರ್. ಉಜ್ಜಿನಪ್ಪ, ಎಲೆಬೇತೂರು ಗ್ರಾಮದ ಪ್ರಮುಖರಾದ ಬಿ. ಕರಿಬಸಪ್ಪ, ಬಿ.ಜಿ. ಸಂಗನಗೌಡ್ರು, ಬಸವರಾಜಪ್ಪ, ಬಿ.ಎಂ. ನರೇಂದ್ರ, ಎಂ. ರಾಜಣ್ಣ, ಎಂ. ಚಂದ್ರಪ್ಪ ಮತ್ತಿತರರಿದ್ದರು.

## ಪಶ್ಚಿಮ ಬಂಗಾಳದಲ್ಲಿ ಬೆಂಕಿ ಹಚ್ಚಿ ಎಂಟು ಜನರ ಹತ್ಯೆ

ನವದೆಹಲಿ, ಮಾ. 22 – ಪಶ್ಚಿಮ ಬಂಗಾಳದ ಬಿರ್ಭೂಮ್ ಜಿಲ್ಲೆಯಲ್ಲಿ ಹತ್ತಾರು ಗುಡಿಸಲುಗಳಿಗೆ ಬೆಂಕಿ ಹಚ್ಚಿ ಎಂಟು ಜನರನ್ನು ಹತ್ಯೆ ಮಾಡಿದ ಘಟನೆ ನಡೆದಿದೆ. ತೃಣಮೂಲ ಕಾಂಗ್ರೆಸ್ ಪಂಚಾಯ್ತಿ ಅಧಿಕಾರಿ ಹತ್ಯೆಗೆ ಪ್ರತಿಯಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೂ 11 ಜನರನ್ನು ಬಂಧಿಸಲಾಗಿದೆ. ಪಶ್ಚಿಮ ಬಂಗಾಳ ಸರ್ಕಾರ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡ ರಚಿಸಿದೆ. ರಾಮಪುರಹತ್ ನಗರದ ಹೊರ ವಲಯದಲ್ಲಿರುವ ಬೊಗ್ತುಯಿ ಹಳ್ಳಿಯಲ್ಲಿ ಈ ಘಟನೆ ನಡೆದಿದೆ.

ನಾನು ಮಲಗಿದ್ದಾಗ ಹಠಾತ್ತನೆ ಬಾಂಬ್ ಸ್ಫೋಟಗಳ ಸದ್ದು ಕೇಳಿ ಬಂತು. ದುಷ್ಕರ್ಮಿಗಳು ನಮ್ಮ ಮನೆಗಳಿಗೆ ಬೆಂಕಿ ಹಚ್ಚಿದ್ದರು. ನಾನು ತಪ್ಪಿಸಿಕೊಂಡು ಬಂದೆ. ಕುಟುಂಬದ ಉಳಿದವರ ಗತಿ ಏನಾಗಿದೆಯೋ ಗೊತ್ತಿಲ್ಲ ಎಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಜಿರಾ ಬೀಬಿ ಹೇಳಿದ್ದಾರೆ.

ಘಟನೆ ಕುರಿತು ವಿವರವಾದ ವರದಿ ಸಲ್ಲಿಸುವಂತೆ ಕೇಂದ್ರ ಗೃಹ ಸಚಿವಾಲಯ ರಾಜ್ಯ ಸರ್ಕಾರಕ್ಕೆ ತಿಳಿಸಿದೆ.



**ಜೈನ್ ಬಡಾವಣೆಯಲ್ಲಿ ಹೋಳಿ ಸಂಭ್ರಮ**

ದಾವಣಗೆರೆ, ಮಾ.23- ಹೋಳಿ ಆಚರಣೆಯ ಸಂಭ್ರಮದಲ್ಲಿರುವ ನಗರದ ಜೈನ ಬಡಾವಣೆ ಮಹಿಳೆಯರು, ಮಕ್ಕಳು.

# ದಾವಣಗೆರೆ ಹಳೆ ಭಾಗದಲ್ಲಿ ಸರ್ಕಾರಿ ಪ.ಪೂ. ಕಾಲೇಜು ಸ್ಥಾಪನೆಗೆ ಒತ್ತಾಯ



ದಾವಣಗೆರೆ, ಮಾ. 22- ನಗರದ ಹಳೇ ಭಾಗಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜು ಮಂಜೂರು ಮಾಡುವಂತೆ ಜನತಾ ಬಜಾರ್ ನಿರ್ದೇಶಕ ಎಂ.ಎನ್. ನಾಗರಾಜ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಅತ್ಯಗತ್ಯವಾಗಿದ್ದು, ಸರ್ಕಾರ ತತ್‌ಕ್ಷಣವೇ ಗಮನ ಹರಿಸಬೇಕು ಎಂದು ಆಗ್ರಹಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಶಾಲೆಗಳು ಇಲ್ಲಿ ಸಾಕಷ್ಟಿದ್ದು, ಪದವಿ ಪೂರ್ವ ವಿದ್ಯಾಭ್ಯಾಸಕ್ಕಾಗಿ ಹಳೇ ಊರಿನಿಂದ ಪಿಬಿ ರಸ್ತೆಯನ್ನು ದಾಟಿ ಹೊಸ ಭಾಗದ ಊರಿಗೆ ಹೋಗುವುದಕ್ಕೆ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ಹಲವಾರು ರೀತಿಯಲ್ಲಿ ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ ಎಂದು ನಾಗರಾಜ್ ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಕಾಲೇಜು ವಿದ್ಯಾಭ್ಯಾಸಕ್ಕಾಗಿ ದೂರದ ಹಾದಿಯ ಜೊತೆಗೆ ವಿಪರೀತ ಡೊನೇಷನ್ ಹಾವಳಿಯಿಂದ ಹಳೇ ಊರಿನ ಬಡ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣ ಪಡೆಯುವುದು ದೂರದ ಮಾತು ಎನ್ನುವಂತಾಗಿದೆ. ಈ ಹಿನ್ನೆಲೆಯಲ್ಲಿ ಈ ಭಾಗಕ್ಕೆ ಸರ್ಕಾರಿ ಪದವಿ ಪೂರ್ವ ಕಾಲೇಜು ಅಗತ್ಯವಾಗಿದೆ ಎಂದು ಅವರು ತಿಳಿಸಿದ್ದಾರೆ.

**ಸರ್ಕಾರಿ ಆಸ್ಪತ್ರೆ ಸ್ಥಾಪಿಸಿ :** ಹಳೇ ಭಾಗದಲ್ಲಿ ಪ್ರಾಥಮಿಕ ಸರ್ಕಾರಿ ಆಸ್ಪತ್ರೆ ಇಲ್ಲದೆ ಜನರು ಪರದಾಡುತ್ತಿದ್ದಾರೆ. ದೊಡ್ಡ ಸರ್ಕಾರಿ ಆಸ್ಪತ್ರೆಗಾಗಿ ಹೊಸ ಭಾಗದ ಊರಿಗೆ ಹೋಗಬೇಕು. ಪ್ರಾಥಮಿಕ ಮತ್ತು ತುರ್ತು ಚಿಕಿತ್ಸೆ ನಿಗದಿತ ವೇಳೆಗೆ ಸಿಗದ ಕಾರಣ ಜೀವ ಕಳೆದುಹೋದ ಪ್ರಕರಣಗಳನ್ನು ಹಳೇ ಊರಿನ ಜನರು ಸಾಕಷ್ಟು ಕಂಡಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರ ತತ್‌ಕ್ಷಣವೇ ಹಳೇ ಭಾಗದ ದಾವಣಗೆರೆಗೆ ಪ್ರಾಥಮಿಕ ಹಾಗೂ ತುರ್ತು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಯನ್ನು ಸ್ಥಾಪಿಸುವಂತೆ ಎಂ.ಎನ್. ನಾಗರಾಜ್ ಸರ್ಕಾರವನ್ನು ಕೇಳಿಕೊಂಡಿದ್ದಾರೆ.

**ಮೈದಾನಕ್ಕೆ ಗಸ್ತು ಒದಗಿಸಿ :** ಹಳೇ ಊರಿನ ಭಾಗಕ್ಕೆ ಅತೀ ದೊಡ್ಡ ಮೈದಾನ ಎನಿಸಿಕೊಂಡಿರುವ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಮೈದಾನಕ್ಕೆ ರಾತ್ರಿ ಪೊಲೀಸ್ ಗಸ್ತು ಒದಗಿಸುವಂತೆ ನಾಗರಾಜ್ ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಆಗ್ರಹಿಸಿದ್ದಾರೆ.

ಈ ಮೈದಾನದಲ್ಲಿ ಮುಂಜಾನೆ ಮತ್ತು ಸಂಜೆ ವೇಳೆ ಸಾಕಷ್ಟು ಜನರು ವಾಯುವಿಹಾರ ಮಾಡುತ್ತಾರೆ. ಮಕ್ಕಳಾದಿಯಾಗಿ ಎಲ್ಲರೂ ಆಟಗಳನ್ನು ಆಡುತ್ತಾರೆ. ಇಂತಹ ಸಂದರ್ಭದಲ್ಲಿ ಪೊಲೀಸ್ ಪೇದೆಯೊಬ್ಬರಿದ್ದರೆ ಜನರು ಗಟ್ಟಿಯಾಗಿ ಉಸಿರಾಡುತ್ತಾರೆ ಎಂದು ಅವರು ಹೇಳಿದ್ದಾರೆ.

ಈ ಮೈದಾನದಲ್ಲಿ ರಾತ್ರಿ ವೇಳೆ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬರುತ್ತಿದ್ದು, ಇಂಥ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪೊಲೀಸ್ ಬಂದೋಬಸ್ತ್ ನಿಯೋಜನೆ ಅಗತ್ಯವಾಗಿದೆ ಎಂದು ನಾಗರಾಜ್ ಅವರು ವರಿಷ್ಠಾಧಿಕಾರಿಗಳಲ್ಲಿ ಕೇಳಿಕೊಂಡಿದ್ದಾರೆ.

## ರಾಣೇಬೆನ್ನೂರಿಗಿಂದು ರಂಭಾಪುರಿ ಶ್ರೀಗಳು



ಶಾಸಕ ಅರುಣ ಕುಮಾರ ಪೂಜಾರ ಮನೆಯಲ್ಲಿ ಇಂದು ಶ್ರೀ ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ, ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಸಭೆಯ ಸಾನ್ನಿಧ್ಯವನ್ನು ಶ್ರೀ ಮದ್ರಂಭಾರಿ ಜಗದ್ಗುರುಗಳು ವಹಿಸುವರು.

## ಕಾಂಗ್ರೆಸ್ ಪಕ್ಷಕ್ಕೆ ನಸೀರ್ ರಾಜೀನಾಮೆ



ದಾವಣಗೆರೆ, ಮಾ.22- ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಪಕ್ಷದ ಮುಖಂಡರೂ, ಮೌಲಾನಾ ಆಜಾದ್ ಸಂಸ್ಥೆಯ ಅಧ್ಯಕ್ಷರೂ ಆದ ಸಿ.ಆರ್. ನಸೀರ್ ಅಹ್ಮದ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

30 ವರ್ಷಗಳ ಕಾಲ ಪಕ್ಷದಲ್ಲಿ ಸಕ್ರಿಯರಾಗಿದ್ದು, ಪಕ್ಷದಲ್ಲಿನ ಇತ್ತೀಚಿನ ಕೆಲವು ವಿಚಾರಗಳು, ಬೆಳವಣಿಗೆಗಳಿಗೆ ಬೇಸತ್ತು ರಾಜೀನಾಮೆ ನೀಡುತ್ತಿರುವುದಾಗಿ ಅವರು ಹೇಳಿದರು.

**ಲತಾಜಿಕೆ ನಾಮ್ - ಸಂಗೀತ ಸಂಜೆ :** ಇತ್ತೀಚೆಗೆ ನಿಧನರಾದ ಲತಾ ಮಂಗೇಶ್ಕರ್ ಅವರ ಹೆಸರಿನಲ್ಲಿ ಶೀಘ್ರವೇ ನಗರದಲ್ಲಿ ಸಂಗೀತ ಸಂಜೆ ಕಾರ್ಯಕ್ರಮ ನಡೆಸಲಾಗುವುದು. ಕಿಶೋರ್ ಕುಮಾರ್ ಅವರ ಪುತ್ರ ಅಮಿತ್ ಕುಮಾರ್, ಆಶಾ ಬೋಂಸ್ಲೆ ಆಗಮಿಸಲಿದ್ದಾರೆ ಎಂದು ಹೇಳಿದರು. ಬರ್ಕತ್ ಅಲಿ ಪತ್ರಿಕಾಗೋಷ್ಠಿಯಲ್ಲಿದ್ದರು.

# 'ದಾವಣಗೆರೆ ಗೃಹಿಣಿ ಸ್ಪರ್ಧೆ'ಯಲ್ಲಿ ಡಾ॥ ದೀಪಶ್ರೀ ಗುಜ್ಜಾರ್ ಪ್ರಥಮ ಸ್ಥಾನ

### ಲೀಲಾ ಸುಭಾಷ್ ದ್ವಿತೀಯ, ಮಧು ಸಂಕೇತ್ - ಉಮಾ ಮಹೇಶ್ವರಿ ತೃತೀಯ



ದಾವಣಗೆರೆ, ಮಾ.22- ನಗರದಲ್ಲಿ ನಿನ್ನೆ ನಡೆದ ಗೃಹಿಣಿ ಸ್ಪರ್ಧೆ - 2022ರಲ್ಲಿ ಪ್ರಥಮ ಬಹುಮಾನವನ್ನು ಡಾ॥ ದೀಪಶ್ರೀ ಪ್ರಮೋದ್ ಗುಜ್ಜಾರ್ ತಮ್ಮದಾಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಶ್ರೀಮತಿ ಲೀಲಾ ಸುಭಾಷ್ ದ್ವಿತೀಯ ಸ್ಥಾನವನ್ನು ಗಳಿಸಿದ್ದರೆ, ತೃತೀಯ ಸ್ಥಾನವನ್ನು ಶ್ರೀಮತಿ ಮಧು ಸಂಕೇತ್ ಮತ್ತು ಶ್ರೀಮತಿ ಉಮಾ ಮಹೇಶ್ವರಿ ಹಂಚಿಕೊಂಡಿದ್ದಾರೆ.

'ಕಲಾಕುಂಚ' ಸಾಂಸ್ಕೃತಿಕ ಸಂಸ್ಥೆಯ ಮಹಿಳಾ ವಿಭಾಗದ ಆಶ್ರಯದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಾಡಾಗಿದ್ದ ಈ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸುವ ಕಾರ್ಯಕ್ರಮವು ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಸ್ಪರ್ಧಾ ವಿಜೇತರಿಗೆ ಪ್ರಮಾಣ ಪತ್ರದೊಂದಿಗೆ ಸ್ಮರಣಿಕೆ ನೀಡಿ, ಕಿರೀಟ ತೊಡಿಸಿ ಗೌರವಿಸಲಾಯಿತು. ವಿಜಯಪುರದ ಕವಯತ್ರಿ, ಶ್ರೀ ಸಿದ್ದೇಶ್ವರ ಸಾಹಿತ್ಯ ವೇದಿಕೆ ಸಂಸ್ಥಾಪಕರಾದ ಶ್ರೀಮತಿ ಗಿರಿಜಾ ಮಾಲಿ ಪಾಟೀಲ್ ಅವರು ವಿಜೇತರಿಗೆ ಬಹುಮಾನ ವಿತರಿಸಿದರು.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೋಜಾ, ಯುವ ಕವಯತ್ರಿ, ಸಾಹಿತಿ ಶ್ರೀಮತಿ ಮಂಜುಳಾ ಪ್ರಸಾದ್ ಬಂಗೇರ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಕಲಾಕುಂಚ ಮಹಿಳಾ ವಿಭಾಗದ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಲಾಕುಂಚದ ವಿವಿಧ ಶಾಖೆಗಳ ಅಧ್ಯಕ್ಷರುಗಳಾದ ಶ್ರೀಮತಿ ಲಲಿತಾ ಕಲ್ಲೇಶ್, ಶ್ರೀಮತಿ ಶಾರದಮ್ಮ ಶಿವನಪ್ಪ, ಶ್ರೀಮತಿ ಸುಜಾತ ಬಸವರಾಜ್, ಕಲಾಕುಂಚ ಮಹಿಳಾ ವಿಭಾಗದ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಕುಸುಮಾ ಲೋಕೇಶ್, ಕೋಶಾಧ್ಯಕ್ಷರಾದ ಶ್ರೀಮತಿ ಗಿರಿಜಮ್ಮ ನಾಗರಾಜ್ ಮುಂತಾದವರು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಮತಿ ವಾಗೀಶ್ವರಿ ಭರತ್ ಮತ್ತು ಸಾವಿತ್ರಿ ಸೂರಜ್ ಪ್ರಾರ್ಥಿಸಿದರು. ಶ್ರೀಮತಿ ಮಂಜುಳಾ ಸುನೀಲ್ ಸ್ವಾಗತಿಸಿದರು. ಶ್ರೀಮತಿ ಶೈಲಾ ವಿನೋದ ದೇವರಾಜ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಸಾವಿತ್ರಿ ಜಗದೀಶ್ ವಂದಿಸಿದರು.

ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ, ಗೌರವ ಅಧ್ಯಕ್ಷರಾದ ಶ್ರೀಮತಿ ವಸಂತಿ ಮಂಜುನಾಥ್, ಶ್ರೀಮತಿ ರಶ್ಮಿ ಭರತ್ ಚನ್ನಗಿರಿ, ಸಮಾಜ ಸೇವಕಿ ಶ್ರೀಮತಿ ಸಾವಿತ್ರ ರೇವಣಸಿದ್ದಪ್ಪ ಆನೆಕೊಂಡ ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಅಭಿವೃದ್ಧಿಯ ಸ್ಫೋಟದಿಂದ ಪರಿಸರ ಕಲುಷಿತ



### ಜಗಳೂರಿನ ನ್ಯಾಯಾಧೀಶರಾದ ಜಿ.ತಿಮ್ಮಯ್ಯ ಕಳವಳ

ಜಗಳೂರು, ಮಾ.22- ಅಭಿವೃದ್ಧಿ ಹೆಸರಿನಲ್ಲಿ ಪರಿಸರ, ಮಣ್ಣು, ನೀರು, ಗಾಳಿ ಎಲ್ಲವೂ ಕಲುಷಿತವಾಗುತ್ತಿವೆ. ನೀರನ್ನು ಸಂರಕ್ಷಿಸದಿದ್ದರೆ ಮುಂದಿನ ಪೀಳಿಗೆ ಸರ್ವನಾಶವಾಗುವುದರಲ್ಲಿ ಅನುಮಾನವಿಲ್ಲ, ಈಗಲೇ ಎಚ್ಚರಿಕೆ ವಹಿಸಬೇಕು ಎಂದು ಸಿವಿಲ್ ನ್ಯಾ. ಜಿ. ತಿಮ್ಮಯ್ಯ ತಿಳಿಸಿದರು.

ತಾಲ್ಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ 'ವಿಶ್ವ ಜಲ ದಿನ' ಮತ್ತು ಕಾನೂನು ಅರಿವು, ನೆರವು ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಇಡೀ ಜಗತ್ತೇ ನೀರಿನ ಸಮಸ್ಯೆ ಅನುಭವಿಸುತ್ತಿದೆ. ಗ್ರಹ ಗುಚ್ಛಗಳಲ್ಲಿ ಭೂಮಿ ಸರ್ವ ಶ್ರೇಷ್ಠವಾದುದು. ಕಾರಣ ಮನುಷ್ಯ ಸೇರಿ ಎಲ್ಲಾ ಸಕಲ ಜೀವ ರಾಶಿಗಳಿಗೂ ನೀರು ಅಮೃತ ಬಿಂದು, ಆದರೆ ಪರಿಸರದ ಬಗ್ಗೆ, ಮಣ್ಣಿನ ಬಗ್ಗೆ, ಕಾಡುಗಳ ನಾಶ ಮತ್ತು ನೀರಿನ ಸಂರಕ್ಷಣೆ ಬಗ್ಗೆ ಮನುಷ್ಯ ತಲೆ ಕೆಡಿಸಿಕೊಳ್ಳುತ್ತಿಲ್ಲ. ಮಿತಿ ಮೀರಿದ ಕಳೆನಾಶಕದ ಔಷಧಗಳನ್ನು ಬಳಸಿ ಮಣ್ಣಿನ ಸೂಕ್ಷ್ಮ ಜೀವಿಗಳನ್ನು ನಾಶ ಮಾಡುತ್ತಿದ್ದೇವೆ. ಮಣ್ಣಿನ ಫಲವತ್ತತೆ ಮತ್ತು ಸಾರ ನಾಶವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾರ್ಬನ್ ಡೈ ಆಕ್ಸೈಡ್ ಹೆಚ್ಚಾಗುತ್ತಿದ್ದು, ಹಸಿರು ಮನೆ ಪರಿಣಾಮದಿಂದ ಓಝೋನ್ ಪದರ ನಾಶವಾಗುತ್ತಿದೆ. ಇದರಿಂದ ಮುಕ್ತವಾಗಬೇಕು ಎಂದರೆ ಭೂಮಿಯನ್ನು ತಂಪಾಗಿಡಬೇಕು. ಸಾವಯವ ಕೃಷಿಯನ್ನು ಮಾಡಬೇಕು. ಅರಣ್ಯ ರಕ್ಷಣೆಗೆ ಬದ್ಧವಾಗಿರಬೇಕು. ಇಲ್ಲದಿದ್ದರೆ ಮುಂದೊಂದು ದಿನ ಆಕ್ಸಿಜನ್ ಇಲ್ಲದೇ ಸಾಯುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬರೂ ಮನೆಯ ಮುಂದೆ ಎರಡೆರಡು ಗಿಡ ನೆಟ್ಟು, ಉಪಯೋಗಿಸುವ ವ್ಯರ್ಥ ನೀರನ್ನು ಅದಕ್ಕೆ ಹಾಕಿದರೆ ಸಾಕು ಅರಣ್ಯ ವೃದ್ಧಿಯಾಗುತ್ತದೆ ಎಂದು ಸಲಹೆ ನೀಡಿದರು.

ಕೆರೆ ಕಟ್ಟೆಗಳನ್ನು ನಿರ್ಮಿಸಿ ಮಳೆ ನೀರು ಸಂಗ್ರಹ ಮತ್ತು ಮಳೆಕೊಯ್ಲು ಹೆಚ್ಚಿಸಬೇಕು. ಜಗಳೂರು ತಾಲ್ಲೂಕಿನ 57 ಕೆರೆಗಳಿಗೆ ನೀರು ಬರುತ್ತಿದ್ದು ಜನರು ಅದನ್ನು ಸದುಪಯೋಗ ಪಡಿಸಿಕೊಳ್ಳಿ, ನೀರನ್ನು ಅನಾವಶ್ಯಕ ವ್ಯರ್ಥ ಮಾಡಬೇಡಿ ಎಂದರು.

ಹಿರಿಯ ವಕೀಲ ಕೆ.ಎನ್.ಪರಮೇಶ್ವರಪ್ಪ ಮಾತನಾಡಿ, ಗ್ರಾಹಕರ ಹಕ್ಕುಗಳ ರಕ್ಷಣೆ ಆಗಬೇಕಾದರೆ ಗ್ರಾಹಕರು ವ್ಯಾಪಾರಸ್ಥರಿಂದ ಖರೀದಿಸಿದ ವಸ್ತುಗಳಿಗೆ ರಶೀದಿ ಪಡೆಯಬೇಕು. ಎಂಆರ್‌ಪಿ ಬೆಲೆ ನೋಡಿ ಕೊಂಡುಕೊಳ್ಳಬೇಕು. ಕ್ವಾಂಟಿಟಿ, ಕ್ವಾಲಿಟಿಯನ್ನು ಪರಿಶೀಲಿಸಿ ಎಚ್ಚರಿಕೆಯಿಂದ ವಸ್ತುಗಳನ್ನು ಖರೀದಿಸಿ ಎಂದು ಸಲಹೆ ನೀಡಿದರು.

ವಕೀಲ ವೈ. ಹನುಮಂತಪ್ಪ ಮಾತನಾಡಿ, ಪಂಚ ಭೂತಗಳಲ್ಲಿ ನೀರಿಗೆ ಪ್ರಧಾನ ಮಹತ್ವವಿದೆ. ಸಂಘ ಜೀವಿಯಾದ ಮನುಷ್ಯ ಇತಿಹಾಸವನ್ನು ನೆನೆದು ವಾಸ್ತವದಲ್ಲಿ ಬದುಕಿದರೆ ಭವಿಷ್ಯ ಉಜ್ವಲವಾಗುತ್ತದೆ. ನೀರನ್ನು ಉಳಿಸಿದರೆ ಭವಿಷ್ಯ, ಇಲ್ಲವಾದರೆ ಜೀವ ಸಂಕುಲ ನಾಶವಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ವಕೀಲರ ಸಂಘದ ಕಾರ್ಯದರ್ಶಿ ಕೆ.ವಿ.ರುದ್ರೇಶ್ ಪ್ರಾಸ್ತಾವಿಕ ಭಾಷಣ ಮಾಡಿದರು, ವಕೀಲರಾದ ಶರಣಪ್ಪ, ಬಸವರಾಜಪ್ಪ, ತಿಪ್ಪೇಸ್ವಾಮಿ ಡಿ.ವಿ., ನಾಗಪ್ಪ ಮುಂತಾದವರು ಉಪಸ್ಥಿತರಿದ್ದರು.

## ಬಸವನಾಳ್‌ನಲ್ಲಿ ಬಸವೇಶ್ವರ ಸ್ವಾಮಿ ರಥೋತ್ಸವ ಇಂದು

ದಾವಣಗೆರೆ ತಾಲ್ಲೂಕು ಆನೆಕೊಂಡದ ಬಸವೇಶ್ವರ ಸ್ವಾಮಿ ರಥೋತ್ಸವ ಹಾಗೂ ಬಸವನಾಳು ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ ಬೆಲ್ಲದ ಬಂಡಿ ಉತ್ಸವ ಹಾಗೂ ಸಂಜೆ ಓಕಳಿ ನಡೆಯುವುದು. ಇಂದು ರಾತ್ರಿ 10 ಗಂಟೆಗೆ 'ಸತಿ ಸಂಸಾರದ ಜ್ಯೋತಿ' ನಾಟಕ ಬಸವ ಕಲಾಲೋಕ ಬಸಾಪುರ ಇವರಿಂದ ಪ್ರದರ್ಶನಗೊಳ್ಳಲಿದೆ.

## ರಾಜಗೋಪಾಲ್ ಭಾಗವತ್‌ಗೆ 'ಗುರುವಂದನೆ'



ದಾವಣಗೆರೆ, ಮಾ.22 - ನಗರದ ಈಶ್ವರಮ್ಮ ಶಾಲಾವರಣದ ರಂಗಮಂಟಪ ದಲ್ಲಿ ಶ್ರೀ ಶಾರದಾ ಸಂಗೀತ ಮತ್ತು ನೃತ್ಯ ಕಲಾಶಾಲೆ ವತಿಯಿಂದ ಪ್ರಸಿದ್ಧ ಕಲಾವಿದೆ ರುಕ್ಮಿಣೀದೇವಿ ಅರುಂಡೇಲ್ ಸಂಸ್ಮರಣಾರ್ಥ 'ನೃತ್ಯ ಸಮರ್ಪಣೆ 2022' ಕಾರ್ಯಕ್ರಮವು ನಡೆಯಿತು.

ವೈವಿಧ್ಯಮಯವಾದ ಹದಿನಾಲ್ಕು ನೃತ್ಯಗಳನ್ನು ಕಲಾಶಾಲೆಯ ನಂದನ, ನಯನ, ಸುನಿಧಿ, ಸಹನ, ವಿಶ್ವಂಭರ ಮುಂತಾದ ಹಿರಿ-ಕಿರಿಯ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದರು. ಗುರುಗಳಾದ ವಿದ್ವಾನ್ ರಾಜಗೋಪಾಲ ಭಾಗವತ್, ವಿದುಷಿ ಪೂರ್ಣಿಮಾ ಭಾಗ ವತ್‌ರಿಗೆ 'ಗುರುವಂದನೆ' ಸಲ್ಲಿಸಲಾ ಯಿತು. ಮುಖ್ಯಅತಿಥಿಗಳಾಗಿ ಈಶ್ವರಮ್ಮ ಶಾಲಾ ಅಧ್ಯಕ್ಷರಾದ ಶ್ರೀಮತಿ ಕೆ.ಆರ್.ಸುಜಾತ ಕೃಷ್ಣ, ಈಶ್ವರಮ್ಮ ಟ್ರಸ್ಟ್ ಅಧ್ಯಕ್ಷರಾದ ಶ್ರೀಮತಿ ಎ.ಆರ್. ಉಶಾ ರಂಗನಾಥ್ ಆಗಮಿಸಿದ್ದರು. ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ ಉಪಸ್ಥಿತರಿದ್ದರು. ಶ್ರೀಕಾಂತ್ ಭಟ್ ಕಾರ್ಯಕ್ರಮ ನಿರೂಪಿಸಿದರು.

## ದುಗ್ಗಮ್ಮ ಜಾತ್ರೆ : ಇಂದು ರಸಮಂಜರಿ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯ ಅಂಗವಾಗಿ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಆವರಣದಲ್ಲಿ ನಡೆಯುತ್ತಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಇಂದು ಸಂಜೆ 6.30 ಕ್ಕೆ ಕೆ.ಎನ್. ಗಜೇಂದ್ರಪ್ಪ ಸಿಪಿಐ, ಆಜಾದ್‌ನಗರ ವೃತ್ತ ಇವರಿಂದ ಚಿತ್ರಗೀತೆ ಹಾಗೂ ಭಾರತಿ ವಾದ್ಯವೃಂದ ಇವರಿಂದ ರಸಮಂಜರಿ. ಪ್ರಾಯೋಜಕರು : ದಿ. ಶ್ರೀಮತಿ ಉಷಾ, ದಿ. ಶ್ರೀ ವೇದಮೂರ್ತಿ ಪಿ. (ಮೂರ್ತೆಪ್ಪ) ಇವರ ಜ್ಞಾಪಕಾರ್ಥವಾಗಿ ವಿ. ಸಿದ್ದೇಶ್, ಮೂರ್ತೆಪ್ಪ ಮತ್ತು ಮಕ್ಕಳು, ಶ್ರೀ ವಿನಾಯಕ ರೈಸ್ ಮಿಲ್, ದಾವಣಗೆರೆ.

ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.

ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :

ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001. 96861 95327

SAMRUDDHI PLY & HARDWARE
We Deal With:
Plywood, Veneers, Laminates
Hardware, Doors, Wallpapers, Kitchen Solution.
Best Quality
Best Brands
Best Price
596/C, Opp Vani Rice Mills, Next To Maha TVS Showroom, Hadadi Road, Davangere - 577004, Dinesh: 9980339333, Priyam: 9611741451, Office: 7676055550

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte